# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 173 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.01.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 173 • PRGI No:KARKAN/2023/88055 • VIJAYANAGARA • 10.01.2025 • Friday • Page:04 • Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


# ವಿಜಯನಗರ ಬಂದ್‌ಗೆ ಮಿಶ್ರಪ್ರತಿಕ್ರಿಯೆ

## ಕೇಂದ್ರ ಗೃಹಮಂತ್ರಿ ಅಮಿತ್ ಶಾ ಹೇಳಿಕೆ ಖಂಡಿಸಿ ಪ್ರತಿಭಟನೆ | ರಾಜೀನಾಮೆಗೆ ಆಗ್ರಹ | ಸಾರಿಗೆ ಅಸ್ತವ್ಯಸ್ಥ, ಪ್ರಯಾಣಿಕರ ಪರದಾಟ

**■ ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಸಂವಿಧಾನ ಸಂರಕ್ಷಣಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಬೆಂಬಲದೊಂದಿಗೆ ಕರೆ ನೀಡಿದ್ದ ವಿಜಯನಗರ ಬಂದ್‌ಗೆ ಜಿಲ್ಲಾದ್ಯಾಂತ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊಸಪೇಟೆ ನಗರದಲ್ಲಿ ಗುರುವಾರ ಬಹುತೇಕ ಅಂಗಡಿಗಳಿಗೆ ರಜೆ ದಿನವಾಗಿದ್ದರಿಂದ ಇನ್ನುಳಿದ ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳು ಮುಚ್ಚಿ ಪ್ರತಿಭಟನೆಗೆ ಬೆಂಬಲಿಸಿವೆ. ಹಾಗೇ ಕೂಡ್ಲಿಗಿ, ಹ.ಬೊ.ಹಳ್ಳಿ,ಯಲ್ಲೂ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಪಟ್ಟಣದಿಂದ ಬೇರೆಡೆಗೆ ತೆರಳುವ ಪ್ರಯಾಣಿಕರು ಪರದಾಡಿದರು. ವೈಯುಕ್ತಿಕ ವಾಹನಗಳು ಮತ್ತು ಆಟೋ ಹಾಗು ಕ್ರೂಸರ್ ವಾಹನಗಳನ್ನು ಅವಲಂಬಿಸಿ ಊರುಗಳಿಗೆ ತೆರಳಿದ್ದು ಕಂಡುಬಂತು. ಬಸ್ ನಿಲ್ದಾಣಗಳು ಬಸ್ಸುಗಳಿಲ್ಲದೆ ಬಿಕೋ ಎನ್ನುತ್ತಿದ್ದರೆ, ತಾಲೂಕು ಕಾರ್ಯಾಲಯ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿಗಳು ಕಚೇರಿಗಳಲ್ಲಿ ಹಾಜರಿದ್ದು, ಸಾರ್ವಜನಿಕರಿಗೆ ಸೇವೆ ನೀಡಲು ಎದುರು ನೋಡುವಂತಿತ್ತು. ಹೂ ವ್ಯಾಪರಸ್ಥರು ಹೂಗುಚ್ಚಗಳನ್ನಿಟ್ಟುಕೊಂಡು ಗ್ರಾಹಕರಿಗಾಗಿ ಕಾಯುತ್ತಿದ್ದರು. ನಗರದ ಮುಖ್ಯ ರಸ್ತೆಗಳಲ್ಲಿದ್ದ



ಸಣ್ಣಪುಟ್ಟ ಚಹಾ ಅಂಗಡಿಗಳು ಬಂದ್ ಆಗಿದ್ದು. ನ್ಯಾಯಾಲಯದಲ್ಲಿ ಎಂದಿನಂತೆ ಕಾರ್ಯಕಲಾಪಗಳು ನಡೆದವು. ಸಾರಿಗೆ ಸೌಲಭ್ಯವಿಲ್ಲದ್ದರಿಂದ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಗೈರಾಗಿದರು. ನಗರದ ರಸ್ತೆಗಳು ಜನರಿಲ್ಲದೆ ಬಿಕೋ ಎನ್ನುವಂತಿತ್ತು.

ನಗರದ ಸಂಘಟನೆಯ ಮುಖಂಡರು ವಾಲ್ಮೀಕಿ ವೃತ್ತದಿಂದ ಮದಕರಿನಾಯಕ ವೃತ್ತ, ಬಸ್ ನಿಲ್ದಾಣ, ಪುನೀತ್‌ರಾಜಕುಮಾರ್ ವೃತ್ತದ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಪಾದಯಾತ್ರೆ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಮಾತನಾಡಿದರು. ಕೇಂದ್ರ ಗೃಹ ಸಚಿವರು ಡಾ.ಬಿ.ಆರ್.ಅಂಬೇಡ್ಕರ ಕುರಿತು ಹಗುರ ಹಾಗೂ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಖಂಡಿಸುತ್ತೇವೆ. ಕೂಡಲೇ ಕೇಂದ್ರ ಸಂಪುಟದಿಂದ ಅವರನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು. ಸಾಹಿತಿ ರಹಮತ್ ತರಿಕೇರಿ, ಸಂಘಟನೆಗಳ ಮುಖಂಡರಾದ ಜಂಬಯ್ಯನಾಯಕ, ಸೋಮಶೇಖರ ಬಣ್ಣದಮನೆ, ನಿಂಬಗಲ್ ರಾಮಕೃಷ್ಣ, ಎಚ್.ಎನ್.ಮಹ್ಮದ್ ಇಮಾಮ್ ನಿಯಾಜಿ, ಪೀರ್‌ಭಾಷಾ, ಕರುಣಾನಿಧಿ, ಪಿ.ವಾಸುದೇವ, ಸಂತೋಷ, ಸ್ಲಂ ವೆಂಕಟೇಶ್, ತಾಯಪ್ಪ ನಾಯಕ ಸೇರಿದಂತೆ ಅನೇಕ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರ ಭದ್ರತೆಯಲ್ಲಿ ಪ್ರತಿಭಟನೆ ಶಾಂತಿಯುತವಾಗಿ ನಡೆಯಿತು.










## ಮೈಕ್ರೋ ನ್ಯೂಸ್

### ಮಾ.8 ರಂದು ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ

**■ ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ತಾಲೂಕು ಕಾನೂನುಗಳ ಸೇವೆ ಸಮಿತಿ ವತಿಯಿಂದ ಮಾರ್ಚ್.8 ರಂದು ಬೆ.10 ರಿಂದ ಸಂಜೆ 5 ಗಂಟೆಯವರೆಗೆ ರಾಷ್ಟ್ರೀಯ ಲೋಕ ಅದಾಲತ್ ನ್ಯಾಯಾಲಯ ಆವರಣದಲ್ಲಿ ನಡೆಯಲಿದ್ದು, ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಇರುವವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜಿ ಸಂದಾನದ ಮೂಲಕ ತಮ್ಮ ಪ್ರಕರಣಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಬಹುದು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜ.10 ತಾಲೂಕು ಕಾನೂನು ಸೇವಾ ಸಮಿತಿಯ ದ್ವೈಮಾಸಿಕ ಸಭೆ

**■ ಹಂಪಿ ಟೈಮ್ಸ್ ಹೊಸಪೇಟೆ**

2025 ನೇ ಸಾಲಿನ ತಾಲೂಕು ಕಾನೂನು ಸೇವಾ ಸಮಿತಿಯ ದ್ವೈಮಾಸಿಕ ಸಭೆಯನ್ನು ಜ.10 ರಂದು ಸಂಜೆ 5:30ಕ್ಕೆ ಹೊಸಪೇಟೆಯ 3ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯನ್ನು 3ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಸಭೆಯಲ್ಲಿ ಮಾ.8 ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್ ಪ್ರಕರಣ ಬಗ್ಗೆ ಚರ್ಚೆ, 2025 ರ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ನಡೆಯಲಿರುವ ಕಾನೂನು ಅರಿವು ನೆರವು ಕಾರ್ಯಕ್ರಮಗಳ ಬಗ್ಗೆ ಚರ್ಚೆ, ಮಧ್ಯಸ್ಥಿಕೆಗಾರರ ಪ್ರಕರಣಗಳು ಮತ್ತು ಪ್ಯಾನಲ್ ವಕೀಲರುಗಳ ಕಾರ್ಯವೈಖರಿಗಳ ಚರ್ಚೆ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಂದ್‌ನಿಂದ ಡಿಪೊ ಸೇರಿದ ಬಸ್‌ಗಳು



**■ ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದಲ್ಲಿ ಧ್ವನಿ ವರ್ಧಕದ ಮೂಲಕ ಗುರುವಾರ ಆಸ್ಪತ್ರೆ, ಸರ್ಕಾರಿ ಕಚೇರಿಗಳು, ಮೆಡಿಕಲ್ ಷಾಪ್ ಹಾಗೂ ಅಗತ್ಯ ವಸ್ತುಗಳ ಪೂರೈಕೆ ಹೊರೆತುಪಡಿಸಿ ಸಂಪೂರ್ಣ ಬಂದ್ ಮಾಡಲಾಗುವುದು ಎಂದು ಪಟ್ಟಣದ ವಿವಿಧ ಸಂಘಟನೆಗಳು ಈ ಮೊದಲೇ ಕರೆ ನೀಡಿದ್ದರಿಂದ, ಮುಂಜಾಗ್ರತ ಕ್ರಮವಾಗಿ ಕೆಲ ಶಾಲಾ, ಕಾಲೇಜುಗಳು, ಅಂಗಡಿ ಮುಂಗಟ್ಟುಗಳು, ಬೀದಿ ಬದಿಯ ವ್ಯಾಪಾರಿಗಳು, ಹೊಟೇಲ್‌ಗಳು ಬಂದ್ ಮಾಡಿದ್ದವು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಗ್ರಾಮೀಣ ಭಾಗದಿಂದ ಬಂದ ವಿದ್ಯಾರ್ಥಿಗಳು ಬಸ್ ಇಲ್ಲದೆ ಪರದಾಡಿದ ದೃಶ್ಯ ಕಂಡುಬಂತು. ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿ ಅವಹೇಳನ ಹಾಗೂ ಹಗುರವಾಗಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ವಿರೋಧಿಸಿ ಕೂಡ್ಲಿಗಿ ಪಟ್ಟಣದ ಬಂದ್ ಹಿನ್ನೆಲೆಯಲ್ಲಿ ವಿವಿಧ ಜನಪರ ಸಂಘಟನೆಗಳು ಪ್ರತಿಭಟನೆಯನ್ನು ನಡೆಸಿದವು. ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಗೊಳಿಸಿ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪಟ್ಟಣದ ಗಾಂಧೀಜಿಯ ಚಿತಾಭಸ್ಮದ ಹುತಾತ್ಮರ ಭವನದ ಮೂಲಕ ಪ್ರತಿಭಟನೆಯನ್ನು ಆರಂಭಿಸಿದರು. ವೀರಮದಕರಿ ವೃತ್ತದಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ಅನೇಕ ಸಂಘಟನೆಗಳ ಅಧ್ಯಕ್ಷರುಗಳು ಮಾತನಾಡಿದರು, ಭಾರತ ಸಂವಿಧಾನದ ಅಡಿಯಲ್ಲಿ ಸಂಸದರಾಗಿ ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಅಮಿತ್ ಶಾ ಅವರು 2024ರ ಡಿಸೆಂಬರ್ 17ರಂದು ರಾಜ್ಯ ಸಭೆಯಲ್ಲಿ ಭಾಷಣ ಮಾಡುವಾಗ ಭಾರತ ಸಂವಿಧಾನದ ಪಿತಾಮಹ ಡಾ.ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಅವಹೇಳನವಾಗಿ ಮತ್ತು ಹಗುರವಾಗಿ ಮಾತನಾಡಿರುವುದು ಖಂಡನೀಯ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಗುರುಸಿದ್ಧನಗೌಡ ಹೇಳಿದರು.

ಸಂವಿಧಾನದ ಸಂರಕ್ಷಣಾ ಸಮಿತಿ ಅಧ್ಯಕ್ಷ ವಕೀಲ ಡಿ.ಎಚ್.ದುರುಗೇಶ್, ವಿರುಪಾಕ್ಷಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಶುಕೂರ್, ಅಖಿಲ್ ಮೌಲನ್, ಕಾಟೇರ್ ಹಾಲೇಶ್, ದೇವರ ಮನೆ ಮಹೇಶ್, ಮಂಜು ಹೊಸಹಳ್ಳಿ, ಎಳೆನೀರು ಗಂಗಣ್ಣ, ಸಿಐಟಿಯು ಕಾರ್ಯದರ್ಶಿ ಗುನ್ನಳ್ಳಿ ರಾಘವೇಂದ್ರ, ಹಿರೇಕುಂಬಳಗುಂಟೆ ಉಮೇಶ್, ಸಿದ್ಧಪ್ಪ, ಬೀದಿಬದಿ ವ್ಯಾಪಾರಿ ಸಂಘದ ಅಧ್ಯಕ್ಷ ಅಲಾನ್‌ಭಾಷ, ವರ್ತಕರ ಸಂಘ, ಆಟೋ ಚಾಲಕರ ಸಂಘ, ಜನವಾದಿ ಮಹಿಳಾ ಸಂಘಟನೆ, ಮುಸ್ಲಿಂ ಸಮಾಜ ಸಂಘಟನೆಗಳು, ಅಂಬೇಡ್ಕರ್ ಸೇವಾ ಸಮಿತಿ, ಬುಡ್ಗ ಹಾಗೂ ಅಲೆಮಾರಿ ಸಮಾಜ ಸಂಘ, ಕರ್ನಾಟಕ ಮಾನವ ಬಂಧುತ್ವ ವೇದಿಕೆ, ಬುದ್ಧ ಬಸವ ಅಂಬೇಡ್ಕರ್ ಜನಪರ ವೇದಿಕೆ, ಭೀಮವಾದ ದಲಿತ ಸಂಘರ್ಷ ಸಮಿತಿ, ವಿಜಯನಗರ ಜಿಲ್ಲಾ ಅಹಿಂದ ಸಂಘಟನೆಗಳ ಒಕ್ಕೂಟ, ಅಹಿಂದ ಯುವ ವೇದಿಕೆ ಸೇರಿದಂತೆ ಇತರೆ ಜನಪರ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಬಂದೋಬಸ್ತ್ ಕಲ್ಪಿಸಿತ್ತು.

## ಅಮಿತ್ ಶಾ ಹೇಳಿಕೆ ವಿರುದ್ಧ ಪ್ರತಿಭಟನೆ




**■ ಹಂಪಿ ಟೈಮ್ಸ್ ಕೊಟ್ಟೂರು**

ಭಾರತೀಯ ಸಂವಿಧಾನ ಪ್ರತಿ ಸಮಾಜಕ್ಕೂ ರಕ್ಷಣೆ, ಸ್ವಾತಂತ್ರ ಕೊಟ್ಟಿದೆ ಇಂತಹ ಪವಿತ್ರ ಸಂವಿಧಾನ ಬರೆದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಪ್ಯಾಶ್ಯನ್ ಷೋ ಗೆ ಹೋಲಿಸಿರುವ ಕೇಂದ್ರ ಗೃಹ ಸಚಿವ ಅಮೀತ ಶಾ ಹೇಳಿಕೆ ಖಂಡನೀಯ. ಶೀಘ್ರ ಅವರು ಅವರ ಸ್ಥಾನಕೆಕ ರಾಜೀನಾಮೆ ಕೊಡಬೇಕೆಂದು ಜಿ.ಪಂ ಮಾಜಿ ಉಪಾಧ್ಯಕ್ಷ ಪಿ.ಎಚ್. ದೊಡ್ಡ ರಾಮಣ್ಣ ಒತ್ತಾಯಿಸಿದರು.

ಕೊಟ್ಟೂರಿನಲ್ಲಿ ಗುರುವಾರ ಸಂವಿಧಾನ ರಕ್ಷಣಾ ಸಮಿತಿ ಹಾಗೂ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಹೇಳಿಕೆ ವಿರೋಧಿಸಿ ರಸ್ತೆ ತಡೆ ನಡೆಸಿ ಪ್ರತಿಭಟನೆ ವೇಳೆ ಮಾತನಾಡಿದರು. ದಲಿತ ಮುಖಂಡರು ಬದ್ದಿ ಮರಿಸ್ವಾಮಿ, ಬ್ಲಾಕ್ ಕಾಂಗ್ರೇಸ ಅಧ್ಯಕ್ಷ ಐ. ದಾರುಕೇಶ,ಎಪಿಎಂಸಿ ಉಪಾಧ್ಯಕ್ಷ ಎಂ. ಶಿವಣ್ಣ, ತಗ್ಗಿನಕೇರಿ ಕೊಟ್ರೇಶ, ಹನುಮಂತಪ್ಪ ವಕೀಲರು, ರೈತ ಸಂಘದ ಭರಮಪ್ಪ, ಕೆ.ಶಿವಕುಮಾರ್ ಮಾತನಾಡಿದರು. ಗ್ರೇಡ್ 2 ತಹಶೀಲ್ದಾರ್ ಪ್ರತಿಭಾ ಅವರಿಗೆ ಪ್ರತಿಭಟನೆ ಮುಖಂಡರು ಮನವಿ ಸಲ್ಲಿಸಿದರು.

# ನಗರಸಭೆ ನೌಕರ ಮಂಜುನಾಥ ನೇಣಿಗೆ ಶರಣು

## ನಗರಸಭೆ ಪೌರಾಯುಕ್ತ ಚಂದ್ರಪ್ಪ, ಆರ್‌ಓ ನಾಗರಾಜ ವಿರುದ್ಧ ಎಫ್‌ಐಆರ್ ದಾಖಲು

**■ ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆ ನೌಕರ ಮಂಜುನಾಥ(25) ಮೇಲಾಧಿಕಾರಿಗಳ ಮಾನಸಿಕ ಹಿಂಸೆ, ಅಧಿಕ ಒತ್ತಡ ಹಾಗೂ ಕಿರುಕುಳ ತಾಳಲಾರದೆ, ಬುಧವಾರ ರಾತ್ರಿ ತಾಲೂಕಿನ ಕಡ್ಡಿರಾಂಪುರ ಗ್ರಾಮದ ಜಿಎಲ್‌ಎನ್ ಗೆಸ್ಟ್ ಗೌಸ್‌ನ ರೂಂ. ನಂಬರ್ 8ರಲ್ಲಿ ನೇಣಿಗೆ ಶರಣಾಗಿದ್ದಾನೆ ಎಂದು ಹಂಪಿ ಪ್ರವಾಸಿ ಪೊಲೀಸ್ ಠಾಣೆಯಲ್ಲಿ ಗುರುವಾರ ದೂರು ದಾಖಲಾಗಿದೆ.

ಮೃತನ ತಂದೆ ದೂರು ದಾಖಲಿಸಿದ್ದು, ಮಗನ ಸಾವಿಗೆ ಕಾರಣರಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕು ಎಂದು ಕೋರಿದ್ದಾರೆ.

**ಎಫ್‌ಐಆರ್ ದೂರಿನಲ್ಲೇನಿದೆ:**

ಮೃತನ ಮೊಬೈಲ್‌ನಲ್ಲಿ ತನ್ನ ಸಾವಿಗೆ ಪೌರಾಯುಕ್ತ ಚಂದ್ರಪ್ಪ ಮತ್ತು ಆರ್‌ಓ ನಾಗರಾಜ ಎಂದು ಟೈಪ್ ಮಾಡಿದ್ದಾನೆ. ಮಂಜುನಾಥನಿಗೆ ಮೊದಲು 1,2,11 ಮತ್ತು



12ನೇ ವಾರ್ಡ್‌ಗಳಿಗೆ ಬಿಲ್ ಕಲೆಕ್ಟರ್ ಆಗಿ ನಿಯೋನೆಗೊಳಿಸಲಾಗಿತ್ತು. ಆರು ತಿಂಗಳ ಹಿಂದೆ ಹೆಚ್ಚುವರಿಯಾಗಿ 32,33,34 ಮತ್ತು 35ನೇ ವಾರ್ಡ್‌ಗಳಿಗೆ ಬಿಲ್ ಕಲೆಕ್ಟರ್ ಕೆಲಸ ಹೆಚ್ಚುರಿಯಾಗಿ ವಹಿಸಲಾಗಿತ್ತು. ಕೆಲಸದ ಒತ್ತಡದಿಂದ ಕೆಲಸ ಮಾಡಲಾಗುತ್ತಿಲ್ಲ. ಬಿಲ್ ಕಲೆಕ್ಟರ್ ಹುದ್ದೆಯಿಂದ ತೆಗದು ಮೂಲ ಹುದ್ದೆಯನ್ನು ಕೊಡಿ ಎಂದು ಕೇಳಲಾಗಿದ್ದರೂ ಪೌರಾಯುಕ್ತರು ಸ್ಪಂದಿಸಿಲ್ಲ. ಹಾಗಾಗಿ ಜ.1 ರಂದು ಆತ್ಮಹತ್ಯೆಗೆ ಯತ್ನಿಸಿದ್ದನು. ಆಗ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಕೊಡಿಸಲಾಗಿತ್ತು. ನಂತರವೂ ಪೌರಾಯುಕ್ತರು ಮಂಜುನಾಥನ ಬೇಡಿಕೆಗೆ ಸ್ಪಂದಿಸದ್ದರಿಂದ ಆತ್ಮಹತ್ಯೆಗೀಡಾಗಿದ್ದು, ಸಾವಿಗೆ ಕಾರಣದಾವರ ವಿರುದ್ಧ ಕ್ರಮಕ್ಕೈಗೊಳ್ಳಬೇಕೆಂದು ಮೃತನ ತಂದ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಮಗನನ್ನು ಕಳೆದುಕೊಂಡ ಪಾಲಕರು, ಸಂಬಂಧಿಗಳ ಆಕ್ರಂದನ ಮುಗಿಲು ಮುಟ್ಟಿತ್ತು.

# ವೀರಶೈವ ಮಹಾಸಭಾದ ತಾಲೂಕು ಗೌರವಾಧ್ಯಕ್ಷರಾಗಿ ವಾಮದೇವ ಶಿವಾಚಾರ್ಯರು ಆಯ್ಕೆ



**■ ಹಂಪಿ ಟೈಮ್ಸ್ ಕಂಪ್ಲಿ**

ಅಖಿಲ ಭಾರತ ವೀರಶೈವ ಮಹಾಸಭಾ ಕಂಪ್ಲಿ ತಾಲೂಕು ಘಟಕದ ಗೌರವಾಧ್ಯಕ್ಷರನ್ನಾಗಿ ಎಮ್ಮಿಗನೂರು ಹಂಪಿಸಾವಿರ ದೇವರ ಮಠದ ವಾಮ ದೇವ ಶಿವಾಚಾರ್ಯರನ್ನು, ತಾಲೂಕಿನ ಎಮ್ಮಿಗನೂರಿನ ಹಂಪಿಸಾವಿರ ದೇವರಮಠ ದಲ್ಲಿ ಗುರುವಾರ ನಡೆದ ಸಭೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಹಾಸಭಾದ ತಾಲೂಕು ಅಧ್ಯಕ್ಷ ಎಲಿಗಾರ ವೆಂಕಟರೆಡ್ಡಿ, ಪದಾಧಿಕಾರಿಗಳಾದ ಜಡೇಮೂರ್ತಿ ಎಮ್ಮಿಗನೂರು, ಜೀರು ಗಾದಿಲಿಂಗ, ಎಸ್.ದೊಡ್ಡ ಬಸಪ್ಪ, ಕೋರಿ ಚನ್ನಬಸವ, ಡಿ.ಮಂಜುನಾಥ, ಜಿ.ಶೇಖರಪ್ಪ, ರವೀಂದ್ರಕುಮಾರ, ಎಸ್.ಶರಣ ಬಸವನಗೌಡ, ಎಚ್. ವೀರನಗೌಡ, ಎಸ್.ಆರ್. ಶಂಕರಗೌಡ, ಕೆ.ಮಹಾದೇವಗೌಡ, ಎಂ.ಜಡೆಪ್ಪ, ಕೆ.ವೀರೇಶ, ಚುನಾವಣಾಧಿಕಾರಿ ಕೆ.ಚಂದ್ರಶೇಖರ್, ಪ್ರಮುಖರಾದ ಕೆ.ಎಂ. ಹೇಮಯ್ಯಸ್ವಾಮಿ, ಅರವಿ ಬಸವನಗೌಡ, ಎಸ್.ಎಂ.ನಾಗರಾಜಸ್ವಾಮಿ, ವಾಲಿ ಕೊಟ್ರಪ್ಪ, ಇಟಗಿ ಬಸವರಾಜಗೌಡ, ಬಳೆ ಮಲ್ಲಿಕಾರ್ಜುನ, ಬಿ.ಸದಾಶಿವಪ್ಪ, ಬಿ.ಮಹೇಶಗೌಡ ಸೇರಿ ವೀರಶೈವ ಸಮಾಜದ ಮುಖಂಡರು ಇದ್ದರು.

## ಸ್ಟುಡೆಂಟ್ ಕಾಲಂ

# ಕನಸಲ್ಲೂ ಕಾಡಿದ ಹುಂಜ



ಬಸರಕೋಡು ಎಂಬುದೊಂದು ಊರು. ಅಲ್ಲಿ ಗಂಗಮ್ಮ ಎಂಬ ಮುದುಕಿ ಇದ್ದಳು. ಅವಳಿಗೆ ಸೀತ ಮತ್ತು ಸಂಗೀತ ಎಂಬ ಇಬ್ಬರು ಮೊಮ್ಮಕ್ಕಳಿದ್ದರು. ಅವರಿಗೆ ಗಂಗಮ್ಮನ ಮನೆಯಲ್ಲಿ ಇರಲು ಇಷ್ಟವಿರಲಿಲ್ಲ. ಗಂಗಮ್ಮ ಒಂದು ಹುಂಜ ಸಾಕಿದ್ದಳು. ಆ ಹುಂಜವನ್ನು ಮಗು ತರ ನೋಡಿಕೊಳ್ಳುತ್ತಿದ್ದಳು. ಆ ಹುಂಜ ವನ್ನು ನೋಡಿದರೆ ಸೀತಳಿಗೆ ಸಂಗೀತಳಿಗೆ ಆಗುತ್ತಿರಲಿಲ್ಲ.

ಆ ಹುಂಜ ಪ್ರತಿದಿನ ಬೆಳಗಿನ ಜಾವ ನಾಲ್ಕು ಗಂಟೆಗೆ ಕೂಗುತ್ತಿತ್ತು. ಹುಂಜ ಕೂಗಿದ ತಕ್ಷಣ ಗಂಗಮ್ಮ ಸೀತಾ ಮತ್ತು ಸಂಗೀತಳನ್ನು ಎಬ್ಬಿಸುತ್ತಿದ್ದಳು. ಒಂದು ದಿನ ಹುಂಜ ಕೂಗಲು ಪ್ರಯತ್ನಿಸಿತು. ಹುಂಜ ಕೂಗುವುದುನ್ನು ತಡೆಯಬೇಕು ಎಂದು ಸೀತಾ ಮತ್ತು ಸಂಗೀತ ಯೋಚಿಸಿದರು. ಆದರೆ ಏನೂ ಉಪಾಯ ಹೊಳೆಯಲಿಲ್ಲ. ಕೊನೆಗೆ ಒಂದು ಉಪಾಯ ಹೊಳೆಯಿತು. ರಾತ್ರಿ ವೇಳೆ ಹುಂಜದ ಗೂಡಿನೊಳಗೆ ಇಡುವ ಕಾಳುಗಳಿಗೆ ವಿಷ ಬೆರೆಸಿ ಕೊಡಬೇಕೆಂದು ಉಪಾಯ ಮಾಡಿದರು.

ತಮ್ಮ ಉಪಾಯದಂತೆ ಹುಂಜದ ಕಾಳಿಗೆ ವಿಷ ಬೆರೆಸಿದರು. ಅದನ್ನು ತಿಂದ ಹುಂಜ ಪ್ರತಿದಿನದಂತೆ ಬೆಳಿಗ್ಗೆ ಕೂಗಲಿಲ್ಲ. ದಿನವೂ ನಾಲ್ಕು ಗಂಟೆಗೆ ಕೂಗುತ್ತಿದ್ದ ಹುಂಜ ಇಂದು ಕೂಗಲಿಲ್ಲವಲ್ಲ ಎಂದು ಗಂಗಮ್ಮ ಎದ್ದು ಹುಂಜವನ್ನು ನೋಡದಳು. ಅದು ಸ್ಥಿತಿಯಲ್ಲಿತ್ತು. ಆಗ ಗಂಗಮ್ಮ ಅದರ ಬಾಯಲ್ಲಿದ್ದ ವಿಷ ತೆಗೆಯಲು ಸೋಪಿನ ನೀರು ಕುಡಿಸಿದಳು. ಹುಂಜದ ಬಾಯಿಯನ್ನು ಸ್ವಚ್ಛ ಮಾಡಿದಳು. ಹುಂಜದಲ್ಲಿದ್ದ ವಿಷ ಹೊರಗೆ ಬಂತು. ಹುಂಜ ಬದುಕಿತು.




ಹುಂಜ ಬದುಕಿದ್ದನ್ನು ನೋಡಿದ ಇಬ್ಬರು ಮೊಮ್ಮಕ್ಕಳು ಸಂಕಟ ಪಟ್ಟರು. ಪ್ರತಿದಿನದಂತೆ ಹುಂಜ ಬೆಳಗಿನ ಜಾವ ನಾಲ್ಕು ಗಂಟೆಗೆ ಕೂಗತೊಡಗಿತು. ಅದರ ಕಾಟಕ್ಕೆ ಬೇಸತ್ತ ಮೊಮ್ಮಕ್ಕಳು ಅದನ್ನು ಕೊಲ್ಲಲು ಪ್ರಯತ್ನಿಸಿದರು. ಕೊಂದರೆ ನೆಮ್ಮದಿಯಿಂದ ನಿದ್ದೆ ಮಾಡಬಹುದು ಎಂದು ಅವರಿಗೆ ಅನಿಸಿತು. ಹುಂಜವನ್ನು ಸಾಯಿಸಲು ಇಬ್ಬರೂ ಖುಷಿಯಿಂದ ಹೊರಗೆ ಹೋಗುತ್ತಿರುವಾಗ ಅವರ ಅಜ್ಜಿ ಕಣ್ಣಿದುರಿಗೆ ಬಂದು ನಿಂತಳು.

ಇಬ್ಬರು ಮೊಮ್ಮಕಳು ಹೆದರಿಕೆಯಿಂದ ನಿಂತರು. 'ನನ್ನ ಹುಂಜವನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವಿರಿ' ಎಂದು ಗಂಗಮ್ಮ ಕೇಳಿದಳು. ಆಗ ಮೊಮ್ಮಕ್ಕಳು "ಅಜ್ಜಿ ಹುಂಜಕ್ಕೆ ಚೆನ್ನಾಗಿರುವ ಆಹಾರವನ್ನು ತಿನ್ನಿಸಿಕೊಂಡು ಬರುತ್ತೇವೆ" ಎಂದರು. ಆವಾಗ ಅಜ್ಜಿ 'ಬೇಡ ನನ್ನ ಹುಂಜ ನನಗೆ ಕೊಟ್ಟು ಬಿಡಿ' ಎಂದಳು. ಈ ಹುಂಜ ನಮ್ಮ ಬಳಿ ಇದ್ದರೆ ಅಜ್ಜಿ ನಮ್ಮನ್ನು ಮಲಗಲು ಬಿಡುವುದಿಲ್ಲ ಎಂದು ತಿಳಿದು ಸಿಟ್ಟಿನಿಂದ ಹುಂಜವನ್ನು ಅಜ್ಜಿಯ ಕೈಗೆ ಕೊಟ್ಟರು.

ರಾತ್ರಿ ಅಜ್ಜಿ ಗಡದ್ದಾಗಿ ಉಂಡು ಮಲಗಿದಳು. ಸೀತಾ ಮತ್ತು ಸಂಗೀತರು ಮಲಗಿರುವ ಹುಂಜವನ್ನು ಮನೆಯ ಹೊರಗೆ ಒಯ್ದು ಚಾಕುವಿನಿಂದ ಸಾಯಿಸಿದರು. ಅಜ್ಜಿ ಬೆಳಿಗ್ಗೆ ಎದ್ದು ನೋಡದರೆ ಹುಂಜ ಕಾಣಲಿಲ್ಲ. ಊರೆಲ್ಲ ಹುಡುಕಿದಳು. ಇಡೀ ದಿನ ಹುಡುಕಿ ಹುಡುಕಿ ದಣಿದಳು. ಹೋಗಲಿ ಬಿಡು ಎಂದು ಅಜ್ಜಿ ಮನೆಗೆ ಬಂದಳು. ಅವಾಗ ರಾತ್ರಿ ಆಯ್ತು. ಅಜ್ಜಿ ಮತ್ತು ಮೊಮ್ಮಕ್ಕಳು ಊಟ ಮಾಡಿ ಮಲಗಿದರು. ಇಬ್ಬರು ಮೊಮ್ಮಕ್ಕಳ ಕನಸಿನಲ್ಲಿ ಹುಂಜ ಬಂದು ಕಾಡತೊಡಗಿತು. ದಿನವೂ ಹೀಗೆ ಆಯಿತು. ಹುಂಜ ಕನಸಿನಲ್ಲಿ ಬರುವುದನ್ನು ನೋಡಿ ಇಬ್ಬರಿಗೆ ಹೆದರಿಕೆ ಆಯಿತು. ಅಜ್ಜಿ ಮುಂದೆ ಎಲ್ಲ ಘಟನೆಯನ್ನು ಹೇಳಿದರು. ಸಂಗೀತ ಮತ್ತು ಸೀತಳಿಗೆ ಅವರ ತಪ್ಪಿನ ಅರಿವಾಗಿತ್ತು. ನಮ್ಮ ನೆಮ್ಮದಿಗೋಸ್ಕರ ಇನ್ನೊಂದು ಜೀವಿಯನ್ನು ಯಾವತ್ತು ಕೊಲ್ಲಬಾರದು ಎಂಬ ಪಾಠವನ್ನು ಕಲಿತಿದ್ದರು.

**– ಯು. ಸಿಂಧು. 8ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹ.ಬೊ.ಹಳ್ಳಿ (ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

ಜನವರಿ 10ರ ವಿಶ್ವ ನಗು ದಿನದ ನಿಮಿತ್ತ ವಿಶೇಷ ಲೇಖನ

# ನಗುವುದ ಕಲಿಯೋಣ... ನಗುತಾ ಬಾಳೋಣ...

ಮನಸ್ಸಿನ ಬಹಳಷ್ಟು ಮಾನಸಿಕ ತುಮುಲಗಳನ್ನು, ಅಡೆತಡೆಗಳನ್ನು ನಿವಾರಿಸಲು ದೇವರು ನಮಗಿತ್ತ ಔಷಧವೇ ನಗು. ಒಮ್ಮೆ ಮನತುಂಬಿ, ಹೊಟ್ಟೆ ತುಂಬಾ ನಕ್ಕರೆ ಮನಸ್ಸು ಹಗುರವಾಗಿ, ಪ್ರಫುಲ್ಲಗೊಂಡು ನವ ಚೈತನ್ಯ ಪಡೆಯುತ್ತದೆ. ನಮಗರಿವಿಲ್ಲದೆಯೇ ನಾವೇ ರೂಪಿಸಿಕೊಂಡ ಕತ್ತಲೆ ಕೂಪದಿಂದ ಸಹಜವಾಗಿ ಹೊರಬಂದುಬಿಡುತ್ತೇವೆ. ಒಂದು ನಿಷ್ಕಲ್ಮಶ ನಗು ಅಂತರಾಳದ ತಳಮಳಗಳನ್ನು ಅನಗತ್ಯ ಒತ್ತಡಗಳನ್ನು ಸಡಿಲವಾಗಿಸಿಬಿಡುತ್ತದೆ. ಹೀಗೆ ನಕ್ಕಾಗ ಮೆದುಳು ಹೃದಯಗಳು ಹಗುರಾಗಿ ವಿಕಸಿತಗೊಂಡು ವ್ಯಾಧಿಪೀಡಿತ ಜಾಗಕ್ಕೆಲ್ಲ ದಿವ್ಯಾಹಾರವಿಯಲು ರಕ್ತಸರಾಗವಾಗಿ ಹರಿದುಕೊಂಡು ಮುನ್ನುಗುತ್ತದೆ. ಬಾಳು ಸರಿಗಮ ರಾಗವಾಗುತ್ತದೆ. ಸುಂದರ ಕ್ಷಣಗಳು ನಮ್ಮದಾಗುತ್ತವೆ. ಹೀಗಾಗಿ ದಿನದ ಒಂದಷ್ಟು ಸಮಯವನ್ನಾದರೂ ನಗುವಿಗಾಗಿ ಮೀಸಲಿಡುವುದು ಒಳಿತು. ಸದಾ ಮುಖ ಗಂಟಿಕ್ಕಿಕೊಂಡು ನಾವು ಸಾಧಿಸುವುದಾದರೂ ಏನಿದೆ? ಹಾಗಂತ ಗಂಭೀರವಾಗಿರಬಾರದೇ? ಎಂದು ಕೇಳಬೇಡಿ. ಗಾಂಭೀರ್ಯಕ್ಕೂ ಗಂಟಿಕ್ಕಿಕೊಳ್ಳುವುದಕ್ಕೂ ಆನೆ –ಆಡಿನಷ್ಟೇ ಅಂತರವಿದೆ.

ನಗು ಕೇವಲ ಒಂದು ಕೃತಕ ಕಾಯಕವಲ್ಲ ಅದು ನಿಸರ್ಗದತ್ತ "ನೋವು ನಿವಾರಕ". ನಾವು ನಕ್ಕಾಗ ನಮ್ಮ ದೇಹದಲ್ಲಿ ನೈಸರ್ಗಿಕ ರಾಸಾಯನಿಕಗಳಾದ ಎಂಡಾರ್ಫಿನ್‌ಗಳು (Endorphins) ಹೆಚ್ಚುತ್ತವೆ. ಇವುಗಳನ್ನು ಸಾಮಾನ್ಯವಾಗಿ "ಹ್ಯಾಪಿ" ಹಾರ್ಮೋನುಗಳು (hormones) ಎಂದು ಕರೆಯಲಾಗುತ್ತದೆ. ಇವು ನೋವನ್ನು ಕಡಿಮೆ ಮಾಡುತ್ತವೆ ಮತ್ತು ನಾವು ಸಂತೋಷವಾಗಿರುವಂತೆ ಮಾಡುತ್ತವೆ .

ಎಂಡಾರ್ಫಿನ್ ರಾಸಾಯನಿಕಗಳ ಮಹತ್ವ....

ನೋವು ನಿವಾರಕ: ಎಂಡಾರ್ಫಿನ್‌ಗಳು ಮೆದುಳು ಮತ್ತು ಬೆನ್ನುಹುರಿ ಗ್ರಾಹಕಗಳನ್ನು ಸಂಪರ್ಕಿಸುವ ಮೂಲಕ ಒತ್ತಡ ಅಥವಾ ನೋವನ್ನು ನಿವಾರಿಸಲು ಸಹಾಯ ಮಾಡುತ್ತವೆ , ನೈಸರ್ಗಿಕವಾಗಿ ನೋವನ್ನು ನಿವಾರಿಸುತ್ತವೆ.

ಭಾವನೆಗಳ ಉತ್ತಮ ನಿರ್ವಾಹಕರು : ಇವು ಭಾವನೆಗಳನ್ನು ನಿರ್ವಹಿಸುತ್ತವೆ ಮತ್ತು ಮನಸ್ಥಿತಿಯನ್ನು ಶಾಂತಗೊಳಿಸುತ್ತವೆ. :ಎಂಡಾರ್ಫಿನ್‌ಗಳು ಒತ್ತಡ ಮತ್ತು ಆತಂಕವನ್ನು ನಿವಾರಿಸುತ್ತವೆ , ಶಾಂತತೆಯನ್ನು ಉತ್ತೇಜಿಸುತ್ತವೆ ಮತ್ತು ಒತ್ತಡದ ಹಾರ್ಮೋನುಗಳನ್ನು ಸಮತೋಲನಗೊಳಿಸುತ್ತವೆ .

**ರೋಗನಿರೋಧಕಗಳಾಗಿ:**

ಅಧ್ಯಯನಗಳು ಇವು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತವೆ , ಅನಾರೋಗ್ಯದಿಂದ ರಕ್ಷಿಸುತ್ತವೆ ಎಂದು ತಿಳಿಸಿವೆ.

" ಬಾಳ ಭರವಸೆಯಾಗಿ ನಗು"!...

ನಗು ಮನೋವೇದನೆಗಳ ಶಮನಕಾರಕ ಮಾತ್ರವಲ್ಲದೇ, ಒತ್ತಡ,ದುಃಖ,ಭಯ, ಅಸಮಾಧಾನ,ಅಸಹಾಯಕತೆ,ನಿರಾಶೆಗಳನ್ನು ದೂರ ಮಾಡಿ ಮನಸ್ಸಿಗೆ ಸಾಂತ್ವನ ನೀಡುತ್ತದೆ.

"ನಗುವೇ ದಿವ್ಯ ಔಷಧಿ"... ಎಂದು ಹೇಳಿದೆ ಅಧ್ಯಯನದ ವರದಿ ಒತ್ತಡದ ಸಂದರ್ಭದಲ್ಲಿ ಬೀರುವ ಮಂದಹಾಸ, ನಮ್ಮ ಹೃದಯ ಬಡಿತದ ಮಟ್ಟಗಳನ್ನು ಕಡಿಮೆಗೊಳಿಸುವುದರ ಮೂಲಕ ದೇಹವನ್ನು ಶೀಘ್ರದಲ್ಲಿ ಒತ್ತಡದಿಂದ ಪಾರು ಮಾಡುತ್ತದೆ ಎಂದು ಹೊಸ ಅಧ್ಯಯನ ತಿಳಿಸಿದೆ.

ನಗುವಿನ ವಿವಿಧ ಪ್ರಕಾರಗಳಿಂದ ಮನುಷ್ಯನ ದೇಹದ ಆರೋಗ್ಯದ ಮೇಲೆ ಆಗುವ ಪ್ರಯೋಜನಗಳ ಬಗ್ಗೆ 'ಕಾನ್ಸಾಸ್ ವಿಶ್ವವಿದ್ಯಾಲಯ'ದ ಮನಶಾಸ್ತ್ರ ವಿಜ್ಞಾನಿಗಳಾದ 'ಟಾರಾ ಕ್ರಾಫ್ಟ್' ಮತ್ತು 'ಸಾರಾ ಪ್ರೆಸ್‌ಮನ್' ಅವರು ಅಧ್ಯಯನ ನಡೆಸಿದ್ದಾರೆ.



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ
Scan For Digital Colourful
HAMPI TIMES E-paper

ತೀವ್ರ ಒತ್ತಡದಿಂದ ಬಳಲುತ್ತಿರುವ ವ್ಯಕ್ತಿಯೊಬ್ಬರಿಗೆ ಅದರಿಂದ ಹೊರಬರುವಲ್ಲಿ ನಗು ಯಾವ ರೀತಿ ಪಾತ್ರವಹಿಸಬಹುದು ಎಂಬುದರ ಬಗ್ಗೆಯೂ ಅವರು ಅಧ್ಯಯನ ನಡೆಸಿದ್ದಾರೆ.

'ನಗು ಕೇವಲ ಸಂತೋಷ ವ್ಯಕ್ತಪಡಿಸುವ ಮಾಧ್ಯಮವಲ್ಲ , ಅದು ತೀವ್ರ ಒತ್ತಡದ ಸನ್ನಿವೇಶ'ಗಳನ್ನು ತಿಳಿಗೊಳಿಸುವ ದಿವ್ಯೌಷಧವೂ ಆಗಿದೆ~ ಎಂದು ಕ್ರಾಫ್ಟ್ ಹೇಳಿದ್ದಾರೆ. ಅಧ್ಯಯನಕ್ಕಾಗಿ ವಿಶ್ವವಿದ್ಯಾಲಯವೊಂದರ 169 ಮಂದಿಯನ್ನು ಸಂಪರ್ಕಿಸಲಾಗಿದೆ. ಇಷ್ಟು ಜನರಿಗೆ ಆರಂಭದಲ್ಲಿ ತರಬೇತಿ ನೀಡಿ ನಂತರ ಅವರನ್ನು ಪರೀಕ್ಷೆಗೆ ಒಳಪಡಿಸಿ ಅಧ್ಯಯನದ ವರದಿಯನ್ನು ವಿಜ್ಞಾನಿ ಗಳಿಬ್ಬರು ಸಿದ್ಧಪಡಿಸಿದ್ದಾರೆ.



### ನಗಲಿಕ್ಕಾಗಿಯೇ ನಾವು ಮಾಡಬಾರದ್ದು....

1. ಯಾವುದೇ ಕಾರಣಕ್ಕೂ ಇನ್ನೊಬ್ಬರನ್ನು ಹೀಯಾಳಿಸಿ ನಗುವುದು ಬೇಡ.
2. ಮತ್ತೊಬ್ಬರ ತಪ್ಪುಗಳನ್ನು ಎತ್ತಿ ಹಿಡಿದು ನಗುವುದು ಬೇಡ.
3. ಅವರಿವರ ಬಗ್ಗೆ ಆಡಿಕೊಂಡು ನಗುವುದು ಬೇಡ
4. ಕೆಲವು ಗಂಭೀರ ಸಮಯಗಳಲ್ಲಿ ನಗುವಿಗಿರಲಿ ವಿರಾಮ.
5.ನಗು ಮಿತವಾಗಿ ಹಿತವಾಗಿ ಇರುವುದು ಒಳಿತು.
6. ಪದೇ ಪದೇ ಸುಖಾಸುಮ್ಮನೆ ನಗ್ತಾ ಇರಬೇಡಿ,ಅದು ನಿಮ್ಮ ಗೌರವಕ್ಕೆ ಧಕ್ಕೆ.
7. ನಗಲಿಕ್ಕಾಗಿ ಅಶ್ಲೀಲ ಜೋಕುಗಳು ಬೇಡ, ಅಂತಹ ಜೋಕುಗಳು ನಿಮ್ಮ ವ್ಯಕ್ತಿತ್ವವನ್ನು ಕುಂದಿಸಬಹುದು ಎಚ್ಚರವಿರಲಿ.
8. ಈಗೀಗ ಕೆಲವು ಕಾಮಿಡಿ ಶೋಗಳು ಅಸಂಬದ್ಧ, ಸೂಕ್ತವಲ್ಲದ ಸಂಭಾಷಣೆಗಳಿಂದ ವಿಜೃಂಭಿಸುತ್ತಿವೆ.ನಿಜಕ್ಕೂ ಇವು ವೀಕ್ಷಿಸಲು ಯೋಗ್ಯವೇ ಯೋಚಿಸಿ?ಇವುಗಳನ್ನು ಹೆಚ್ಚು ಹೆಚ್ಚು ವೀಕ್ಷಿಸಿದಷ್ಟು ಮನಸ್ಸುಗಳು 'ಆಕಾರ'ಗೊಳ್ಳದೆ 'ವಿಕಾರ'ಗೊಳ್ಳಬಹುದು ಎಚ್ಚರ!
10. ನಗೆ ಹಗೆಯಾಗದಿರಲಿ, ಹೊಗೆಯಾಗದಿರಲಿ ಮನಗಳ ಬೆಸೆವ ಸೋಗೆಯಾಗಲಿ.

ಹೀಗೆ ನಗುವು ಎಲ್ಲರ ಬಾಳ ಬುತ್ತಿಯಲಿ ಕಡ್ಡಾಯದ ತಿನಿಸಾಗಲಿ, ನೀವು ತಿನ್ನಿ, ಹಸಿದವರಿಗೂ ತಿನ್ನಿಸಿ, ನಗು ಮನಗಳನ್ನ ಅರಳಿಸಲಿ ಕೆರಳಿಸುವುದು ಬೇಡ.
ನಗುವುದೇ ಸ್ವರ್ಗ, ಅಳುವುದೇ ನರಕ ನಗುವುದ ಕಲಿಯೋಣ ನಗುತಾ ಬಾಳೋಣ! ಏನಂತೀರಾ?...

### ನಗುನಗುತಾ ಇರಲು ನಾವೇನು ಮಾಡಬಹುದು...

1. ಉತ್ತಮ ಹಾಸ್ಯ ಪ್ರಸಂಗ, ಹಾಸ್ಯದ ಘಟನೆಗಳನ್ನು ಆಗಾಗ್ಗೆ ಮೆಲಕು ಹಾಕಿ ನಿಮ್ಮೊಳಗೆ ನಗುತ್ತಾ ಇರಿ.
2. ಹಾಸ್ಯ ಪುಸ್ತಕಗಳು ನಿಮ್ಮ ಮನೆಯ ಕಿರು ಗ್ರಂಥಾಲಯದಲ್ಲಿ ಕಡ್ಡಾಯವಾಗಿ ಇರಲಿ.
3. ಇವುಗಳನ್ನು ಆಗಿಂದಾಗ್ಗೆ ಓದುತ್ತಿದ್ದರೆ ಜ್ಞಾನ ಭಂಡಾರ ಹೆಚ್ಚಾಗಿ, ಮನಶ್ಶಾಂತಿ ಹೆಚ್ಚಾಗಿ ಬಾಳು ನೆಮ್ಮದಿಯ ಮಂದಿರವಾಗುತ್ತದೆ.
4. ಈಗ ಸಾಕಷ್ಟು ಹಾಸ್ಯ ಕಾರ್ಯಕ್ರಮ, ಹಾಸ್ಯ ಮಂಜರಿಗಳು ಆಯೋಜನೆಯಾಗುತ್ತಿವೆ ಬಿಡುವು ಮಾಡಿಕೊಂಡು ಪಾಲ್ಗೊಳ್ಳಿ.
5. ಹಲವಾರು ಉತ್ತಮ ಹಾಸ್ಯ ಕಲಾವಿದರ,ನಗಿಸುವವರ ಮುದ್ರಿತ ತುಣುಕುಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಸಮಯ ಸಿಕ್ಕಾಗ ಅವುಗಳನ್ನು ವೀಕ್ಷಿಸಿ, ಆನಂದಿಸಿ.
6. ನಿಮ್ಮದೇ ಸಮಾನಮನಸ್ಕರ ತಂಡವನ್ನು ಮಾಡಿಕೊಂಡು ಪ್ರತಿ ದಿನ ನಡೆದ ಯಾವುದಾದರೂ ಕುಹಕವಲ್ಲದ ಹಾಸ್ಯ ಪ್ರಸಂಗಗಳನ್ನು ಅವರೊಂದಿಗೆ ಹಂಚಿಕೊಂಡು ನಗಿ.
7. ಹಲವು ಹಾಸ್ಯ ನಾಟಕಗಳು, ಹಾಸ್ಯಧಾರವಾಹಿಗಳು, ಹಾಸ್ಯ ಚಲನಚಿತ್ರಗಳು ಲಭ್ಯವಿವೆ.ಅವುಗಳನ್ನು ವೀಕ್ಷಿಸಿ, ಮನೋರಂಜನೆ ಪಡೆದು ಮನೋವೇದನೆ ದೂರಮಾಡಿಕೊಳ್ಳಿ.
8. ಪುಟ್ಟ ಮಕ್ಕಳೊಂದಿಗೆ ಕಾಲ ಕಳೆಯಿರಿ. ಅವರಾಡುವ ತುಂಟಾಟಗಳು ಸಹಜ ನಗುವನ್ನು ಉಕ್ಕಿಸುತ್ತದೆ.
9. ಮನೆ ಮಂದಿ ಎಲ್ಲಾ ಕೂತು ನಿಷ್ಕಲ್ಮಶ ಭಾವದಿಂದ, ಪ್ರತಿನಿತ್ಯ ಹಾಸ್ಯ ಚಟಾಕಿಗಳನ್ನು ಹೇಳುವ, ಓದುವ, ಓದುತ್ತಾ ಕೇಳುವ, ಯೋಜನೆ, ಯೋಚನೆ ಬಾಂಧವ್ಯ ಬೆಸೆಯುವ ಜೊತೆಗೆ ಮನಸ್ಸುಗಳನ್ನು ಹಗುರಾಗಿಸುತ್ತದೆ.
10. ಈಗೀಗ ನಗರಗಳಲ್ಲಿ ಹೆಚ್ಚು ಲಾಫಿಂಗ್ ಕ್ಲಬ್ ಗಳು ನಗಿಸಲು ಬಂದಿವೆ ಅನಿವಾರ್ಯವಾದರೆ ಅವಕ್ಕೂ ಸೇರಿಕೊಳ್ಳಿ.

### ನಗುವಿನ ಮಹತ್ತನ್ನು ಕೆಲ ಮಹಾನ್ ವ್ಯಕ್ತಿಗಳ ನುಡಿಮುತ್ತುಗಳು

" ನಕ್ಕ ಸಾಯ್ರೋ", " ನಕ್ಕ ಸಾಯ್ರಿ"...." ನಕ್ಕು ಸತ್ರ"
" ನಕ್ಷತ್ರ ಅಕ್ಕೀರಿ"....!
– ದ. ರಾ. ಬೇಂದ್ರೆ

ನಗುವು ಸಹಜದ ಧರ್ಮ। ನಗಿಸುವುದು ಪರಧರ್ಮ ॥ ನಗುವ ಕೇಳುತ ನಗುವುದತಿಶಯದ ಧರ್ಮ। ನಗುವ ನಗಿಸುವ ನಗಿಸಿ ನಗುತ ಬಾಳುವ ವರವ, ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ
– ಡಿ. ವಿ. ಜಿ

"ನಗುವು ಎರಡು ಜನರ ನಡುವಿನ ಕಡಿಮೆ ಅಂತರವಾಗಿದೆ."
– ವಿಕ್ಟರ್ಬೋರ್ಜ್

ನಗು ಎಲ್ಲಾ ಗಾಯಗಳನ್ನು ಗುಣಪಡಿಸುತ್ತದೆ, ಮತ್ತು ಪ್ರತಿಯೊಬ್ಬರೂ ಹಂಚಿಕೊಳ್ಳುವ ಒಂದು ವಿಷಯ.ನೀವು ಏನನ್ನು ಅನುಭವಿಸುತ್ತೀರೋ ಅದು ನಿಮ್ಮ ಸಮಸ್ಯೆಗಳನ್ನು ಮರೆತುಬಿಡುತ್ತದೆ. ಜಗತ್ತು ನಗುತ್ತಲೇ ಇರಬೇಕು ಎಂದು ನಾನು ಭಾವಿಸುತ್ತೇನೆ.
– ಕೆವಿನ್ ಹಾರ್ಟ್

ನಗು ಇಲ್ಲದ ದಿನ ವ್ಯರ್ಥ." – ಚಾರ್ಲಿ ಚಾಪ್ಲಿನ್

"ನಗು ಒಂದು ದೈಹಿಕ ವ್ಯಾಯಾಮ, ಆರೋಗ್ಯಕ್ಕೆ ಅಮೂಲ್ಯ."
– ಅರಿಸ್ಟಾಟಲ್

ನಿನಗೆ ಸಾಧ್ಯವಾದಾಗ ಯಾವಾಗಲೂ ನಗು, ಇದು ಅಗ್ಗದ ಔಷಧವಾಗಿದೆ."
– ಜಾರ್ಜ್ ಗಾರ್ಡನ್ ಬೈರಾನ್

**ನಗುವಿನ ಕುರಿತ ಜನಪದರ ಮಾತುಗಳು**
ಏನನ ಬರ್ಲಿ ನಕ್ಕಂತ ಕೆಲಕಂತ ಇರ್ಬೇಕು.
ನಕ್ಕಂತ ಇದ್ರ, ನಾಳೆ ಬಂದುದ್ದು ಗೊತ್ತಾಗಲ್ಲ.

# ಹೆಚ್ಚುವರಿ ಸಂಗ್ರಹ ಮೊತ್ತ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯಗಳಿಗೆ ಬಳಸಿ

## ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಿ: ಸಿ.ಎಂ ಸೂಚನೆ | ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆ

**ಹಂಪಿ ಟೈಮ್ಸ್ ಬೆಂಗಳೂರು:**
ರಾಜೀವ್ ಗಾಂಧಿ ವೈದ್ಯಕೀಯ ವಿವಿಯಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯಗಳಿಗಾಗಿ ಒದಗಿಸಲು ಮತ್ತು ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಲು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.

ಕೃಷ್ಣಾದಲ್ಲಿ ನಡೆದ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಈ ಸೂಚನೆ ನೀಡಿದರು.

ಪ್ರಸ್ತುತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ರೂ.400 ಕೋಟಿ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ರೂ.130 ಕೋಟಿ ಅನುದಾನ ಒದಗಿಸಲಾಗಿದೆ. ಈ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚಿಸಿದರು.

2024–25 ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ



ರೂ.4331 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಇದುವರೆಗೆ ರೂ.3099 ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ರೂ.3005 ಕೋಟಿ ವೆಚ್ಚ ಮಾಡಲಾಗಿದ್ದು, ಬಿಡುಗಡೆ ಮೊತ್ತಕ್ಕೆ ಶೇ. 96.97 ಪ್ರಗತಿ ಸಾಧಿಸಲಾಗಿದೆ ಎಂದು ಸಚಿವರು ವಿವರಿಸಿದರು.

**ಸಭೆಯ ಇತರೆ ಮುಖ್ಯಾಂಶಗಳು...**

2023–24 ಸಾಲಿನಲ್ಲಿ ಅನುಮೋದನೆಗೊಂಡು, ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದ ಒಳಗಾಗಿ ಪೂರ್ಣಗೊಳಿಸಬೇಕು.

ಗದಗ, ಕೊಪ್ಪಳ, ಕಾರವಾರ,ಕೊಡಗು ಜಿಲ್ಲೆಗಳಲ್ಲಿ ನಿರ್ಮಾಣ ಹಂತದಲ್ಲಿರುವ 450 ಹಾಸಿಗೆ ಆಸ್ಪತ್ರೆಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ.

ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯಗಳಿಗಾಗಿ ಒದಗಿಸುವ ಕುರಿತು ಕ್ರಮ ಕೈಗೊಳ್ಳಬೇಕು.

ನಿಮ್ಹಾನ್ಸ್‌ನಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯ ನೇಮಕಾತಿಗೆ ಕ್ರಮ ಕೈಗೊಳ್ಳಬೇಕು. ಕ್ಯಾನ್ಸರ್ ಪ್ರಮಾಣ ಹೆಚ್ಚಳವಾಗಲು ಕಾರಣ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕು. ಕ್ಯಾನ್ಸರ್ ಚಿಕಿತ್ಸೆಗೆ ಅಂತಾರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆ ರಾಜ್ಯದಲ್ಲಿಯೇ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ವೈಕುಂಟದ ನೋಟ

ಜನ್ಮಾಂತರಕೂ ದುರ್ಲಭವು ವೈಕುಂಠದ ನೋಟ
ಜಗದಾಧಾರ ಶ್ರೀ ಹರಿಯ ಲೀಲೆಯೇ ಈ ಆಟ
ಶಂಖ ಚಕ್ರ ಗಧಾಧಾರ
ಮಾಯಾಲೋಲನಿವನು
ಅನಂತಶಯನನು ನಮಗೆಲ್ಲ ಪರಮ ಪಾವನನು

ಯೋಗ ನಿದ್ರೆಯಲಿರುತ್ತಲೇ ಸೃಷ್ಟಿಯ ಸಂಕಲ್ಪ
ಅಗಣಿತವು ಈತನ ಮಹಿಮೆ ತಿಳಿಯಲು ಮತಿ ಅಲ್ಪ
ಸೃಷ್ಟಿಕರ್ತ ಬ್ರಹ್ಮ ನಾಭಿಯಿಂದಲೇ ಉಗಮ
ಬ್ರಹ್ಮಾಂಡದ ಚಾಲಕ ಶಕ್ತಿ ಈತನಿಂದಲೇ ಎಲ್ಲ ಸುಗಮ

ಅನವರತವು ಸಂದಿದೆ ಹರಿಗೆ ಶ್ರೀ ಲಕ್ಷ್ಮೀಯ ಸೇವೆ
ಇವರ ಕೃಪೆಯಿರದೆ ದಾಟುವುದೇ ಭವಸಾಗರದ ನಾವೆ
ಹರಿ ಸಾಯುಜ್ಯಕೆ ಬೇಕು ಅವಿರತ ದೃಢ ಭಕ್ತಿ
ಕಳೆಯಲಿ ಮೊದಲು ನಮ್ಮ ವಿಷಯಗಳಲ್ಲಿನ ಆಸಕ್ತಿ

ಕ್ಷೀರಸಾಗರದ ಅಲೆಗಳಂತೆ ಏರಿಳಿತವು ಜೀವಕೆ ಸಹಜ
ಮಾಯೆ ಕರ್ಮದ ಗತಿಯು ಗಹನವು ಅರಿಯಲು ಮನುಜ
ಹರಿ ಭಕುತಿಯಲಿ ಮಿಂದವಗೆ ಇರದು ಹಲವಾರು ಜನುಮ
ನಡೆಯುವ ವೈಕುಂಠದ ದಾರಿಯಲಿ ಪಠಿಸುತ ಹರಿ ನಾಮ


~ ಚೇತನ ಭಾರ್ಗವ, ಬೆಂಗಳೂರು

visit our website
www.hampitimes.com
epaper.hampitimes.com

# ಅದೃಷ್ಟವೆಂಬ ಲಿಪ್ಟ್‌ಗಿಂತ ನಂಬಿಕೆಯ ಮೆಟ್ಟಿಲೇ ವಾಸಿ!

**ಡಾ. ರಾಜಶೇಖರ ಜಮದಂಡಿ** ಮೈಸೂರು






ಪ್ರತಿಯೊಬ್ಬರ ಬದುಕು ಸಾಮಾನ್ಯವಾಗಿ ಬಹು ವಿಸ್ತಾರವಾದುದು. ಸಾಧನೆಯ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಮೇಲಿಂದ ಮೇಲೆ ಕಾಡುತ್ತವೆ. ಅವುಗಳಿಂದ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಕೆಲವೊಮ್ಮೆ ಸೋಲುಗಳೇ ಬೆನ್ನತ್ತಿರುತ್ತವೆ. ಕಾರಣ ಸಮಯ, ಸಂದರ್ಭ, ಸನ್ನಿವೇಶಗಳೆಲ್ಲಾ ಯಾವತ್ತೂ ನಮ್ಮ ಪರವಾಗಿರುವುದಿಲ್ಲ. ಯಾವಾಗಲೂ ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಓಡಿ ಹೋಗುವುದರಿಂದ ಸಮಸ್ಯೆಗೂ, ಪರಿಹಾರಕ್ಕೂ ಇರುವ ಅಂತರ ಜಾಸ್ತಿಯಾಗುವುದೇ ಹೊರತು ಸಮಸ್ಯೆ ಇತ್ಯರ್ಥಕ್ಕೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸಮಸ್ಯೆ ಎದುರಾದಾಗ ಅದನ್ನು ಬಗೆಹರಿಸುವುದು ಹೇಗೆ ಎಂದು ಯೋಚಿಸಿ, ಕ್ರಮ ಕೈಗೊಳ್ಳಬೇಕು. ನಮಗೆ ಯಾರೋ ಬಂದು ಸಹಾಯ ಮಾಡುತ್ತಾರೆಂದೋ ಕಾಯುವುದಕ್ಕಿಂತ ನಾವೇ ದೃಢನಿರ್ಧಾರದಿಂದ ಕಾರ್ಯಪ್ರವೃತ್ತರಾಗುವುದು ಒಳಿತು. ಅಂದರೆ ನಮ್ಮ ಮುಂದೆ ಉತ್ತಮ ಹಾಗೂ ಸುಗಮವಾದ ದಾರಿ ನಿರ್ಮಾಣವಾಗಲಿ ಎಂದು ವರ್ಷಗಟ್ಟಲೆ ಕಾಯುವುದರಲ್ಲಿ ಪ್ರಯೋಜನವಿಲ್ಲ. ದಿನನಿತ್ಯ ಸ್ವಲ್ಪ ಸ್ವಲ್ಪ ನಡೆಯುವುದರಿಂದ ಹೊಸ ದಾರಿಯೇ ನಿರ್ಮಾಣವಾಗುತ್ತಾ ಹೋಗುತ್ತದೆ.

ಈ ಸಂದರ್ಭದಲ್ಲಿ ಸಹಜವಾಗಿ ನಮಗೆ ಅದೃಷ್ಟವಿಲ್ಲವೆಂದು ಗೊಣಗಾಡುವುದು ಮತ್ತು ಕೈಚೆಲ್ಲಿ ಕೂಡುವುದೇ ಹೆಚ್ಚು. ಮಾಡುವ ಕೆಲಸಕಾರ್ಯಗಳಲ್ಲಿ ನಂಬಿಕೆ ಇಲ್ಲದಿದ್ದರೆ ಯಶಸ್ಸು ಸುಲಭವಾಗಿ ದಕ್ಕುವುದಿಲ್ಲ, ಬೆನ್ನಟ್ಟಿ ಬರುವುದಿಲ್ಲ. ನಾವೇ ಬೆನ್ನಟ್ಟಿ ಹೋಗಿ ಅಪ್ಪಿಕೊಳ್ಳಬೇಕು. ಹಿರಿಯರು ಹೇಳಿದಂತೆ ಮನಸ್ಸಿದ್ದಲ್ಲಿ ಮಾರ್ಗ ವುಂಟು ಮತ್ತು ಮರಳಿ ಯತ್ನವ ಮಾಡು ಎಂಬುದು. ಹಿಂಜರಿದರೆ ಸೋಲು ನಮ್ಮನ್ನಾಳುತ್ತದೆ. ಪ್ರಾಮಾಣಿಕವಾದ ಪ್ರಯತ್ನಕ್ಕೆ ಎಂಥಹ ಸೋಲೂ ತಲೆಬಾಗುತ್ತದೆ. ಹಾಗಾಗಿ ಸೋಲನ್ನೇ ಸೋಲಿಸಿದಾಗ ಗೆಲುವು ನಮ್ಮದಾಗುತ್ತದೆ. ಮಾಡುವ ಕೆಲಸಗಳಲ್ಲಿ ಸಕರಾತ್ಮಕ ಚಿಂತನೆ ಇರಬೇಕೆಂಬುದೆನೋ ಸರಿ. ಆದರೆ ನಕಾರತ್ಮಕ ಯೋಚನೆಯೂ ಅಗತ್ಯ. ಧನಾತ್ಮಕ ಚಿಂತನೆ ವಿಮಾನದ ಆವಿಷ್ಕಾರಕ್ಕೆ ದಾರಿ ಮಾಡಿಕೊಟ್ಟರೆ, ಋಣಾತ್ಮಕ ಚಿಂತನೆಯಿಂದ ಪ್ಯಾರಾಚೂಟ್‌ನ ಸಂಶೋಧನೆಯೂ ಮಹತ್ವ ಪಡೆಯುತ್ತದೆ.

ನಮ್ಮ ದೃಷ್ಟಿ ಆಕಾಶದಲ್ಲೇ ನೆಟ್ಟಿರಲಿ ತಪ್ಪಲ್ಲ. ಆದರೆ ಕಾಲುಗಳು ಮಾತ್ರ ಭದ್ರವಾಗಿ ನೆಲದಲ್ಲೇ ಊರಿರಲಿ. ಬುನಾದಿ ಗಟ್ಟಿಯಾಗಿದ್ದಷ್ಟೂ ಕ್ಷೇಮ. ನಾವು ಹೆಚ್ಚು ಉತ್ಸಾಹಶಾಲಿಗಳು, ಆರೋಗ್ಯವಂತರೂ, ಆಯುಷ್ಯವಂತರಾಗಿರಬೇಕಾದರೆ ಮೆಟ್ಟಿಲು ಗಳೆಂಬ ನಂಬಿಕೆಯಿಂದ ಶ್ರಮವಹಿಸಿ ದುಡಿಯಬೇಕು. ಈಚೆಗೆ ಯಾರಿಗೂ ಕಷ್ಟಪಡುವುದಕ್ಕಿಂತ ಸುಲಭವಾದ ದಾರಿಗಳನ್ನು ಹುಡುಕುವವರೇ ಹೆಚ್ಚು. ಇದರಿಂದ ಅಲ್ಪತೃಪ್ತಿ ದೊರೆಯಬಹುದೇ ಹೊರತು ಹೆಚ್ಚಿನ ಖುಷಿ ಖಂಡಿತಾ ಸಿಗಲಾರದು. ಸುಖ ಹೆಚ್ಚಾದಷ್ಟೂ ದೇಹದಲ್ಲಿ ಅನೇಕ ಕಾಯಿಲೆಗಳು ಸೇರಿಕೊಂಡು ಆರೋಗ್ಯ ಕುಂಠಿತವಾಗುತ್ತಾ ಸಾಗಿದೆ.

ಲಿಫ್ಟ ನಯನಾಜೂಕಿಗೆ ಬಹಿರಂಗದ ಸುಖಕ್ಕೆ ಮೂಲವಾದರೆ ಮೆಟ್ಟಿಲು ಪರಿಶ್ರಮಕ್ಕೆ ಅಂತರಂಗದ ಆರೋಗ್ಯಕ್ಕೆ ಮೂಲ. ಜೀವನದಲ್ಲಿ ಅದೃಷ್ಟವೆಂಬ ಲಿಫ್ಟ ವಿದ್ಯುತ್ ಇಲ್ಲದಾಗ ಅಥವಾ ರಿಪೇರಿಗೆ ಬಂದಾಗ ಕೈಕೊಡಬಹುದು. ಆದರೆ ನಂಬಿಕೆ ಹಾಗಲ್ಲ. ನಂಬಿಕೆಯೆಂಬ ಮೆಟ್ಟಿಲುಗಳು ನಿತ್ಯ ನಿರಂತರ. ಅದು ಎಂತಹ ಕೆಲಸವನ್ನಾದರೂ ಮಾಡಿಸುತ್ತದೆ. ಅದಕ್ಕೆ ಅಸಾಧ್ಯವೆಂಬುದಿಲ್ಲ. ಆದರೆ ಮನದಲ್ಲಿ ನಂಬಿಕೆ ಬಲವಾಗಿರಬೇಕು ಪ್ರಭಾವಶಾಲಿಯಾಗಿರಬೇಕು. ಸಾವಧಾನ ವಾಗಿ ಗುರಿ ಮುಟ್ಟಲು ಅನುಕೂಲವಾಗುತ್ತದೆ. ಕಣ್ಣಿನ ದೂರಳತೆಯ ಗುರಿಯನ್ನು ತಲುಪುವಾಗ ಮೆಟ್ಟಿಲುಗಳು ಸಹಕಾರಿಯಲ್ಲದೆ ದೈಹಿಕ ಶಕ್ತಿ, ಮಾನಸಿಕ ದೃಢತೆ ಹೆಚ್ಚಿಸುತ್ತವೆ. ಮಾಡುವ ಕೆಲಸಗಳು ನಂಬಿಕೆಯಿಂದ ಕೂಡಿದ್ದರೆ ಸೂಕ್ತವಾದ ಪ್ರತಿಫಲವೂ ದಕ್ಕುವುದರಲ್ಲಿ ಸಂಶಯವಿಲ್ಲ.

# ಸರಸ್ ಮೇಳದಲ್ಲಿ ಭಾಗವಹಿಸುವವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ– ಸಿಇಓ ರಾಹುಲ್ ರತ್ನಂ ಪಾಂಡೇಯ

■ **ಹಂಪಿ ಟೈಮ್ಸ್ ಕೊಪ್ಪಳ**

ಜನವರಿ 15 ರಂದು ನಡೆಯುವ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ನಡೆಯುವ ಸರಸ್ ಮೇಳದಲ್ಲಿ ಭಾಗವಹಿಸುವ ರಾಜ್ಯದ ವಿವಿಧ ಜಿಲ್ಲೆಯ ಸ್ವ– ಸಹಾಯ ಸಂಘದ ಸದಸ್ಯರಿಗೆ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ ಸಮಿತಿ ಸಭಾಂಗಣದಲ್ಲಿ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಕರೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಾಜ್ಯದ ವಿವಿಧ 16 ಜಿಲ್ಲೆಗಳಿಂದ ಬರುವ ಸ್ವ– ಸಹಾಯ ಸಂಘದ ಸದಸ್ಯರು ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಮಳಿಗೆಗಳನ್ನು ಹಾಕಿ ಅವರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವರು. ಅವರಿಗೆ ಉಳಿದುಕೊಳ್ಳಲು ಸೂಕ್ತ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಅವರಿಗೆ ಉಳಿದುಕೊಳ್ಳಲು ಸೂಕ್ತ ವಸತಿ ವ್ಯವಸ್ಥೆ ಮಾಡಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರಸ್ ಮೇಳದ ಮಳಿಗೆಗಳಿಗೆ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಸೂಕ್ತ ಜಾಗವನ್ನು ನೀಡಿದ್ದಾರೆ. ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸೇರಿದಂತೆ ಇತರೆ ವಿವಿಧ ಇಲಾಖೆಯ ಮಳಿಗೆಗಳನ್ನು ಸಹ ಹಾಕಲಾಗುತ್ತದೆ. ನಮ್ಮ ಜಿಲ್ಲೆಯ ಸ್ವ– ಸಹಾಯ ಸಂಘದ ಸದಸ್ಯರಿಗಿಂತ ಬೇರೆ ಜಿಲ್ಲೆಯಿಂದ ಬರುವ ನಮ್ಮ ಅತಿಥಿಗಳಿಗೆ ಯಾವುದೇ ಸಮಸ್ಯೆಗಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಮ್ಮ ಮೇಲಿದೆ ಎಂದು ಹೇಳಿದರು.

ಕಳೆದ ಸಲ ಸ್ವ–ಸಹಾಯ ಸಂಘದ ಸದಸ್ಯರು ಯಾವ– ಯಾವ ವಸತಿ ನಿಲಯಗಳಲ್ಲಿ ಉಳಿದುಕೊಂಡಿದ್ದರು, ಅಲ್ಲಿ ಅವರಿಗೆ ಇರಲು ವ್ಯವಸ್ಥೆ ಮಾಡಿ ಮತ್ತು ಕಳೆದ ಸಲ ಏನಾದರೂ ಸಮಸ್ಯೆಗಳಾಗಿದ್ದರೆ ಅದು ಈ ಸಲ ಮರುಕಳಿಸಿದಂತೆ ನೋಡಿಕೊಳ್ಳಬೇಕು. ಒಂದು ವಸತಿ ನಿಲಯಗಳಲ್ಲಿ ಎಷ್ಟು ಜನ ಇರಬಹುದು ಎಂಬುದರ ಅಂದಾಜು ಪಟ್ಟಿ ತಯಾರಿಸಿ. ಹಾಗೂ ಸ್ವ. ಸಹಾಯ ಸಂಘದ ಎಲ್ಲಾ ಮಳಿಗೆಗಳಲ್ಲಿ ಕ್ಯೂ–ಆರ್ ಕೋಡ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಮತ್ತು ತಮ್ಮ ಯಾವುದೇ ಸಲಹೆ ಸೂಚನೆಗಳಿದ್ದರು ತಿಳಿಸಿ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಪ್ರಕಾಶ ವಿ., ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್., ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ, ಲೀಡ್ ಬ್ಯಾಂಕ್ ಮ್ಯಾನೇಜರ್ ವೀರೆಂದ್ರಕುಮಾರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ಗವಿಶಂಕರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ನಾಗಮಣಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಜ್ಮೀರ ಅಲಿ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ವಸತಿ ನಿಲಯಗಳ ಮೇಲ್ವಿಚಾರಕರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಬಳ್ಳಾರಿ ಜಿಲ್ಲೆಗೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ಸದಸ್ಯರ ಭೇಟಿ

# ಕೇಂದ್ರ ಕಾರಾಗೃಹ, ಬಿಮ್ಸ್ ಆಸ್ಪತ್ರೆಯಲ್ಲಿನ ಸ್ಥಿತಿಗತಿ ಪರಿಶೀಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**



ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಮ್ ಭಟ್ ಹಾಗೂ ನ್ಯಾಯಾಂಗ ಸದಸ್ಯರಾದ ಎಸ್.ಕೆ. ವಂಟಿಗೋಡಿ ಅವರು, ಗುರುವಾರ ಬಳ್ಳಾರಿ ನಗರದ ಜಿಲ್ಲಾ ಆಸ್ಪತ್ರೆಯ 100 ಹಾಸಿಗೆಗಳ ತಾಯಿ ಮತ್ತು ನವಜಾತ ಶಿಶುಗಳ ಆಸ್ಪತ್ರೆ, ಜಿಲ್ಲಾ ಕೇಂದ್ರ ಕಾರಾಗೃಹ, ಬಿಮ್ಸ್ ಆಸ್ಪತ್ರೆ, ಸರ್ಕಾರಿ ಬುದ್ಧಿಮಾಂದ್ಯ ಬಾಲಕರ ಬಾಲಮಂದಿರ ಹಾಗೂ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ಜಿಲ್ಲಾ ಆಸ್ಪತ್ರೆ:**
ಮೊದಲಿಗೆ ಜಿಲ್ಲಾ ಆಸ್ಪತ್ರೆ ಆವರಣದ 100 ಹಾಸಿಗೆಗಳ ತಾಯಿ ಮತ್ತು ನವಜಾತ ಶಿಶುಗಳ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಒಬಿಜಿ ವಾರ್ಡ್, ಪ್ರಸೂತಿ ವಿಭಾಗದ ಮುಂದೆ ಇದ್ದ ಗರ್ಭಿಣಿಯರು, ಬಾಣಂತಿಯರ ಆರೋಗ್ಯ ಕ್ಷೇಮ ವಿಚಾರಿಸಿದರು. ವೈದ್ಯರು ಸಮಯಕ್ಕೆ ಸರಿಯಾಗಿ ಬರುತ್ತಾರೆಯೇ? ಆರೋಗ್ಯ ಸೇವೆ ಒದಗಿಸುವಲ್ಲಿ ವಿಳಂಬ ತೋರುತ್ತಿದ್ದಾರೆಯೇ? ಎಂದು ವಿಚಾರಿಸಿದರು.

ಹೆರಿಗೆ ಕೋಣೆಗೆ ಭೇಟಿದ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಹೆರಿಗೆ ವಾರ್ಡ್‌ಗಳಲ್ಲಿ ಸ್ವಚ್ಛತೆ ಆದ್ಯತೆ ನೀಡುವಂತೆ ಸೂಚಿಸಿದರು. ಬಳಿಕ ಔಷಧಿ ವಿತರಣಾ ವಿಭಾಗಕ್ಕೆ ಭೇಟಿ ನೀಡಿ, ವಿವಿಧ ರೀತಿಯ ಎಲ್ಲಾ ಔಷಧಿಗಳು ಲಭ್ಯವಿದೆಯೇ? ಅವಧಿ ಮೀರಿದ ಔಷಧಿಗಳನ್ನು ವಿತರಿಸುವಂತಿಲ್ಲ ಎಂದು ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಜಿಲ್ಲಾ ಕೇಂದ್ರ ಕಾರಾಗೃಹ:**
ನಗರದ ಎಸ್.ಪಿ ಕಚೇರಿ ಹಿಂಭಾಗದ ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ವ್ಯವಸ್ಥೆಯ ಪರಿಶೀಲನೆ ನಡೆಸಿದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು, ಜೈಲಿನಲ್ಲಿರುವ ವಿಚಾರಾಣಾಧೀನ ಕೈದಿಗಳ ಮೂಲಭೂತ ಹಕ್ಕುಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದುಕೊಂಡರು. ನಂತರ ಕಾರಾಗೃಹದಲ್ಲಿನ ಊಟ ತಯಾರಿಕಾ ಸ್ಥಳ ಅಡುಗೆ ಕೋಣೆ ಸೇರಿದಂತೆ ಹಲವೆಡೆ ಭೇಟಿ ನೀಡಿ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು. ವಿಚಾರಣಾದೀನಾ ಕೈದಿಗಳಿಗೆ ನೀಡುವ ಉಪಹಾರ, ಊಟ, ಕುಡಿಯುವ ನೀರಿನ ಗುಣಮಟ್ಟದ ಕುರಿತು ಚರ್ಚಿಸಿದ ಅವರು, ವೇಳಾಪಟ್ಟಿಯಂತೆ ಆಹಾರ ವಿತರಣೆ ಮಾಡಲಾಗುತ್ತಿದೆಯೇ ಎಂದು ವಿಚಾರಿಸಿ ಮಾಹಿತಿ ಪಡೆದುಕೊಂಡರು.

ಜೈಲಿನ ಸುರಕ್ಷತೆ ಕುರಿತು ಮಾಹಿತಿ ಪಡೆದ ಅಧ್ಯಕ್ಷರು, ಜೈಲಿನಲ್ಲಿ ಸಿಸಿ ಕ್ಯಾಮರಾ ಸಂಖ್ಯೆ ಹೆಚ್ಚಿಸಲು ಸಲಹೆ ನೀಡಿದರು, ಅಲ್ಲದೆ ಅನಾರೋಗ್ಯಕ್ಕೆ ತುತ್ತಾಗುವ ಜೈಲುವಾಸಿಗಳು ಔಷಧಿಯನ್ನು ಸಿಬ್ಬಂದಿಗಳ ಸಮಕ್ಷಮವೇ ಸೇವಿಸಬೇಕು, ಔಷಧಿ ಸೇವಿಸದೆ, ಹಾಗೆಯೇ ಇರಿಸಿಕೊಂಡು, ಒಂದೇ ಬಾರಿ ಎಲ್ಲ ಔಷಧಿ ಸೇವಿಸಿದರೂ ಕೂಡ ಅವರ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಕಾರಾಗೃಹದಲ್ಲಿ ಧ್ಯಾನ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸಬೇಕು, ಜೈಲುವಾಸಿಗಳ ಸುರಕ್ಷತೆಗೂ ಹೆಚ್ಚಿನ ಆದ್ಯತೆ ನೀಡಲು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಜೈಲು ಅಧೀಕ್ಷಕರಾದ ಲತಾ ಅವರು ಉಪಸ್ಥಿತರಿದ್ದು, ಜೈಲಿನ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಜೈಲಿನಲ್ಲಿದ್ದ ವಿವಿಧ ಪ್ರಕರಣಗಳಲ್ಲಿ ಜೈಲುವಾಸಿಗಳಾಗಿರುವ ಕೈದಿಗಳನ್ನು ಭೇಟಿಯಾಗಿ, ಕೈದಿಗಳಿಗೆ ಕಾನೂನು ನೆರವು ದೊರೆಯುತ್ತಿರುವ ಬಗ್ಗೆ, ಊಟೋಪಹಾರದ ಬಗ್ಗೆ ಜೈಲಿನ ವ್ಯವಸ್ಥೆಗಳ ಬಗ್ಗೆಯೂ ಮಾಹಿತಿ ಪಡೆದ ಆಯೋಗದ ಅಧ್ಯಕ್ಷರು ಹಾಗೂ ನ್ಯಾಯಾಂಗ ಸದಸ್ಯ ಎಸ್.ಕೆ. ವಂಟಗೋಡಿ ಅವರು, ಜೈಲಿನಲ್ಲಿ ಸೊಳ್ಳೆಗಳನ್ನು ನಿಯಂತ್ರಿಸಲು ಫಾಗಿಂಗ್ ಮಾಡಿಸುವುದು ಹಾಗೂ ಕಿಟಕಿಗಳಿಗೆ ಸೊಳ್ಳೆಗಳು ಜೈಲು ಕೋಣೆಗಳನ್ನು ಪ್ರವೇಶಿಸದಂತೆ ಪರದೆಯನ್ನು ಹಾಕಿಸಲು ಸಲಹೆ ನೀಡಿದರು.

**ಬಿಮ್ಸ್ ಆಸ್ಪತ್ರೆ:**
ಬಳಿಕ, ಬಳ್ಳಾರಿ ವೈದ್ಯಕೀಯ ಸಂಶೋಧನಾ ಮಹಾವಿದ್ಯಾಲಯ ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ, ಹೊರರೋಗಿ ಮತ್ತು ಒಳರೋಗಿಗಳ ಬಳಿ ಸಂವಾದ ನಡೆಸಿದರು. ಆರೋಗ್ಯ ಸೇವೆ ನೀಡುವಲ್ಲಿ ಹಣದ ಆಮಿಷ ಒಡ್ಡುತ್ತಿದ್ದಾರೆಯೇ? ಎಂದು ವಿಚಾರಿಸಿದರು. ಬಳಿಕ ಬಿಮ್ಸ್‌ನ ಹೆರಿಗೆ ಕೋಣೆ ಸೇರಿದಂತೆ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿದರು.

**ಬುದ್ಧಿಮಾಂದ್ಯ ಬಾಲಕರ ಸರ್ಕಾರಿ ಬಾಲಮಂದಿರ:**
ನಗರದ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಬುದ್ಧಿಮಾಂದ್ಯ ಬಾಲಕರ ಸರ್ಕಾರಿ ಬಾಲಮಂದಿರಕ್ಕೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಮ್ ಭಟ್ ಹಾಗೂ ನ್ಯಾಯಾಂಗ ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಭೇಟಿ ನೀಡಿದರು.

ಬಾಲಮಂದಿರದಲ್ಲಿ ದಾಖಲಾದ ಮಕ್ಕಳ ವಿವರ ಪಡೆದುಕೊಂಡರು. ಮಕ್ಕಳನ್ನು ಕಾಲಾನುಮಿತಿಯಲ್ಲಿ ಆರೋಗ್ಯ ತಪಾಸಣೆ ನಡೆಸಬೇಕು. ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಬಾಲಮಂದಿರವನ್ನು ಸ್ವಚ್ಛವಾಗಿರಿಸಬೇಕು, ರಕ್ಷಣೆ ಸೇವೆಯಲ್ಲಿ ಯಾವುದೇರೀತಿಯಲ್ಲಿವ್ಯತ್ಯಯವಾಗಬಾರದು ಎಂದು ಬಾಲಮಂದಿರದ ಅಧೀಕ್ಷಕರಿಗೆ ಸೂಚಿಸಿದರು.

**ನಿರಾಶ್ರಿತರ ಪರಿಹಾರ ಕೇಂದ್ರ:**
ಬಳಿಕ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಶಾಂತಿಧಾಮ ಆವರಣದ ಸಮಾಜ ಕಲ್ಯಾಣ ಇಲಾಖೆಯ ನಿರಾಶ್ರಿತ ಪರಿಹಾರ ಕೇಂದ್ರದ ಪುರುಷರ ವಿಭಾಗ ಹಾಗೂ ಮಹಿಳಾ ವಿಭಾಗಕ್ಕೆ ಭೇಟಿ ನೀಡಿ ವೀಕ್ಷಿಸಿದರು. ಊಟ, ವಸತಿ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳ ಬಗ್ಗೆ ವಿಚಾರಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಇದೇ ವೇಳೆ ಆಪ್ತ ಕಾರ್ಯದರ್ಶಿ ಅರುಣ ಪೂಜಾರ ಅವರು ಅಧ್ಯಕ್ಷರೊಂದಿಗೆ ಉಪಸ್ಥಿತರಿದ್ದು, ಹಲವಾರು ಉಪಯುಕ್ತ ಸಲಹೆ ಸೂಚನೆಗಳನ್ನು ಇಲಾಖಾಧಿಕಾರಿಗಳಿಗೆ ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯಉಪನಿರ್ದೇಶಕಮಲ್ಲಿಕಾರ್ಜುನ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ತಹಶೀಲ್ದಾರ ಗುರುರಾಜ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ಅಧ್ಯಾಯ 13 : ನಮ್ಮ ಪರಿಸರ

1. ಪರಿಸರ ವ್ಯವಸ್ಥೆಯಲ್ಲಿನ ಆಹಾರ ಸರಪಳಿಗೆ ಒಂದು ಉದಾಹರಣೆಯನ್ನು ಕೊಡಿ, ಎರಡನೇ ಪೋಷಣಾಸ್ತರದಲ್ಲಿರುವ ಜೀವಿಗಳ ಸಂಖ್ಯೆಯು ಹೆಚ್ಚಾದರೆ ಇದು ಆ ಆಹಾರ ಸರಪಳಿಯ ಮೇಲೆ ಹೇಗೆ ಪರಿಣಾಮವನ್ನು ಬೀರುತ್ತದೆ ?

ಉತ್ತರ : ಹುಲ್ಲು → ಮಿಡತೆ → ಕಪ್ಪೆ → ಹಾವು → ಗಿಡುಗ
(ಹುಲ್ಲುಗಾವಲು ಆಹಾರ ಸರಪಳಿ)

ಸಸ್ಯಗಳು → ಚಿಕ್ಕ ಮೀನುಗಳು → ದೊಡ್ಡ ಮೀನುಗಳು → ತಿಮಿಂಗಲ
(ಜಲಪರಿಸರ ವ್ಯವಸ್ಥೆಯ ಆಹಾರ ಸರಪಳಿ)

- ಎರಡನೆಯ ಪೋಷಣಾಸ್ತರದಲ್ಲಿರುವ ಜೀವಿಗಳ ಸಂಖ್ಯೆಯು ಹೆಚ್ಚಾದರೆ, ಮೊದಲ ಪೋಷಣಾ ಸ್ತರದಲ್ಲಿರುವ ಜೀವಿಗಳ ಸಂಖ್ಯೆಯು ಕಡಿಮೆಯಾಗುತ್ತದೆ.
- ಕ್ರಮೇಣ ಉಳಿದ ಪೋಷಕಾಸ್ತರಗಳಲ್ಲಿರುವ ಜೀವಿಗಳ ಸಂಖ್ಯೆಯು ಕಡಿಮೆಯಾಗುತ್ತದೆ.
- ಪರಿಸರದಲ್ಲಿ ಅಸಮತೋಲನವನ್ನು ಉಂಟುಮಾಡುತ್ತದೆ.

2. ಆಹಾರ ಸರಪಳಿಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತವೆ. ಕಾರಣ ಕೊಡಿ. SEP-2020

ಉತ್ತರ : ಆಹಾರ ಸರಪಳಿಯ ಪ್ರತಿ ಪೋಷಣಾ ಸ್ತರದಲ್ಲಿ ಪ್ರತಿಶತ 10 ರಷ್ಟು ಶಕ್ತಿ ನಷ್ಟವಾಗುತ್ತಾ ಹೋಗುತ್ತದೆ. ಇದರಿಂದಾಗಿ ಮುಂದಿನ ಪೋಷಣಾ ಸ್ತರಗಳಿಗೆ ಶಕ್ತಿಯ ಲಭ್ಯತೆ ಕಡಿಮೆಯಾಗುತ್ತದೆ. ಆದ್ದರಿಂದ ಆಹಾರ ಸರಪಳಿಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತವೆ.

3. ಪೋಷಣಾ ಸ್ತರ ಎಂದರೇನು ? ಪರಿಸರ ವ್ಯವಸ್ಥೆಯಲ್ಲಿ ಶಕ್ತಿಯ ಹರಿವು ಯಾವಾಗಲೂ ಏಕಮುಖ ವಾಗಿರುತ್ತದೆ. ಏಕೆ? ವಿವರಿಸಿ. APR-2020, APR-2022

ಉತ್ತರ : ಆಹಾರ ಸರಪಳಿಯ ವಿವಿಧ ಮಜಲುಗಳನ್ನು (ಹಂತಗಳನ್ನು) ಪೋಷಣಾ ಸ್ತರ ಎನ್ನುವರು.

- ಪ್ರತಿ ಪೋಷಣಾ ಸ್ತರದಲ್ಲಿ ಶಕ್ತಿಯು ನಷ್ಟವಾಗುವುದರಿಂದ ಕಡಿಮೆಯಾಗುತ್ತಾ ಹೋಗುತ್ತದೆ.
- ಶಕ್ತಿಯ ಹರಿವು ಪೋಷಣೆಯ ಮೂಲಕ ನಡೆಯುತ್ತದೆ. ಹಾಗಾಗಿ ಶಕ್ತಿಯು ಉತ್ಪಾದಕಗಳಿಂದ ಸಸ್ಯಹಾರಿಗಳಿಗೆ ನಂತರ ಮಾಂಸಾಹಾರಿಗಳಿಗೆ ವರ್ಗಾವಣೆಯಾಗುತ್ತದೆಯೇ ಹೊರತು ವಿರುದ್ಧದಿಕ್ಕಿನಲ್ಲಿ ಹರಿಯುವುದಿಲ್ಲ.

4. ಓಝೋನ್ ಪದರವು ಹೇಗೆ ಉಂಟಾಗಿದೆ?

ಉತ್ತರ:– ಓಝೋನ್ ಪದರವು ಸೂರ್ಯನಿಂದ ಬರುವಂತಹ ನೇರಳಾತೀತ ಕಿರಣಗಳ ಶಕ್ತಿಯನ್ನು ಹೀರಿಕೊಂಡು ಎರಡು ಅಣುವಿನ ಆಕ್ಸಿಜನ್ ವಿಭಜನೆಗೊಂಡು ಏಕ ಪರಮಾಣುವಿನ ಆಕ್ಸಿಜನ್ ಆಗುತ್ತದೆ. ಈ ಪರಮಾಣು ತಕ್ಷಣವೇ ಎರಡು ಪರಮಾಣುವಿನ ಆಕ್ಸಿಜನ್ ನೊಂದಿಗೆ ವರ್ತಿಸಿ ಓಝೋನ್($O_3$) ಉಂಟಾಗುತ್ತದೆ.

5. ಓಜೋನ್ ಪದರದ ಕುಸಿತಕ್ಕೆ ಕಾರಣಗಳೇನು? ಅಥವಾ ಇತ್ತೀಚಿನ ದಿನಗಳಲ್ಲಿ ಕ್ಲೋರೋಫ್ಲೋರೋ ಕಾರ್ಬನ್ (CFC) ಮುಕ್ತ ರೆಫ್ರಿಜರೇಟರ್ ಗಳನ್ನು ತಯಾರಿಸುತ್ತಾರೆ. ಏಕೆ ? JUN-2022

ಉತ್ತರ : ಶೀತಲೀಕರಣ ಮತ್ತು ಅಗ್ನಿಶಾಮಕದಲ್ಲಿ ಬಳಸಲ್ಪಡುವ ಕ್ಲೋರೋ ಫ್ಲೋರೋ ಕಾರ್ಬನ್(CFC) ಮಾಲಿನ್ಯಕಾರಕವಾಗಿದ್ದು ಓಝೋನ್ ಪದರಿನ ಕುಸಿತಕ್ಕೆ ಅಥವಾ ಹಾನಿಗೆ ಕಾರಣವಾಗಿದೆ. ಇದನ್ನು ತಡೆಗಟ್ಟಲು CFC ಮುಕ್ತ ರೆಫ್ರಿಜರೇಟರ್ ಗಳನ್ನು ತಯಾರಿಸುತ್ತಾರೆ.

6. ಓಝೋನ್ ಪದರವನ್ನು ರಕ್ಷಿಸುವುದು ಅಗತ್ಯವಾಗಿದೆ. ಏಕೆ ? SEP-2020

ಉತ್ತರ : ಏಕೆಂದರೆ, ಓಝೋನ್ ಪದರು ಸೂರ್ಯನಿಂದ ಬರುವ ಹಾನಿಕಾರ ನೇರಳಾತೀತ ವಿಕಿರಣಗಳಿಂದ ಭೂಮಿಯ ಮೇಲಿನ ಜೀವಿಸಂಕುಲಗಳನ್ನು ರಕ್ಷಿಸುವ ರಕ್ಷಾ ಕವಚವಾಗಿದೆ.

7. ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರವೇನು ? JUN-19,SEP-20,MAR-22

ಉತ್ತರ : ವಿಘಟಕಗಳು ಸತ್ತ ಜೀವಿಗಳನ್ನು ಮತ್ತು ತ್ಯಾಜ್ಯಗಳನ್ನು ವಿಭಜಿಸಿ ಸಾವಯವ ಪದಾರ್ಥಗಳನ್ನು ಮಣ್ಣಿಗೆ ಸೇರಿಸುತ್ತವೆ.

8. ಜೈವಿಕ ಸಂವರ್ಧನೆ ಎಂದರೇನು ? JUN-22,JUNE-23

ಉತ್ತರ : ಕೆಲವು ಕೀಟನಾಶಕಗಳು, ರಾಸಾಯನಿಕಗಳು ಆಹಾರ ಸರಪಳಿಯನ್ನು ಪ್ರವೇಶಿಸಿದಾಗ ಒಂದು ಪೋಷಣಾಸ್ತರದಿಂದ ಇನ್ನೊಂದು ಪೋಷಣಾಸ್ತರಕ್ಕೆ ಹೋದಂತೆ ಗರಿಷ್ಠ ಸಾಂದ್ರತೆಯಲ್ಲಿ ಸಂಗ್ರಹವಾಗುತ್ತವೆ. ಇದನ್ನು ಜೈವಿಕ ಸಂವರ್ಧನೆ ಎನ್ನುವರು.

9. ಮಾಲಿನ್ಯಕ್ಕೆ ಒಳಪಟ್ಟ ಜಲಪರಿಸರ ವ್ಯವಸ್ಥೆಯಲ್ಲಿ ಕಂಡುಬರುವ ಆಹಾರ ಸರಪಳಿಯೊಂದನ್ನು ನೀಡಿದೆ. ಇದನ್ನು ವೀಕ್ಷಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ ?

ಸಿಹಿನೀರು → ಶೈವಲಗಳು → ಮೀನುಗಳು → ಪಕ್ಷಿಗಳು

i. ಜೈವಿಕ ಸಂವರ್ಧನೆಯಿಂದ ಹೆಚ್ಚು ತೊಂದರೆಗೆ ಒಳಗಾಗುವ ಜೀವಿಗಳು ಯಾವುವು ? ಏಕೆ ?

ii. ಜೈವಿಕ ಸಂವರ್ಧನೆಯಿಂದ ಈ ಪರಿಸರ ವ್ಯವಸ್ಥೆಯು ಕ್ರಮೇಣವಾಗಿ ನಶಿಸಿ ಹೋಗುತ್ತದೆ, ಏಕೆ ?

ಉತ್ತರ : i. ಜೈವಿಕ ಸಂವರ್ಧನೆಯಿಂದ ಹೆಚ್ಚು ತೊಂದರೆಗೆ ಒಳಗಾಗುವ ಜೀವಿಗಳು – ಪಕ್ಷಿಗಳು , ಏಕೆಂದರೆ ಒಂದು ಪೋಷಣಾಸ್ತರದಿಂದ ಇನ್ನೊಂದು ಪೋಷಣಾಸ್ತರಕ್ಕೆ ಹೋದಂತೆ ಜೈವಿಕ ಸಂವರ್ಧನೆಗೆ ಒಳಗಾಗುವ ರಾಸಾಯನಿಕಗಳ ಸಾಂದ್ರತೆ ಹೆಚ್ಚುತ್ತಾ ಹೋಗುತ್ತದೆ.

ii. ಜೈವಿಕ ಸಂವರ್ಧನೆಗೆ ಒಳಗಾಗುವ ರಾಸಾಯನಿಕಗಳು ಆಹಾರ ಸರಪಳಿಯಲ್ಲಿ ಸಂಗ್ರಹವಾಗುತ್ತಾ ಹೋಗುತ್ತವೆ. ಇವುಗಳನ್ನು ಆಹಾರ ಸರಪಳಿಯಿಂದ ಹೊರತೆಗೆಯಲು ಸಾಧ್ಯವಿಲ್ಲ. ಆದ್ದರಿಂದ ಪರಿಸರ ವ್ಯವಸ್ಥೆ ಕ್ರಮೇಣ ನಶಿಸಿ ಹೋಗುತ್ತದೆ.

10. ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ "ಮರುಚಕ್ರೀಕರಣ'ದ ಎರಡು ಮಹತ್ವಗಳನ್ನು ಬರೆಯಿರಿ.

ಉತ್ತರ : • ಜೈವಿಕ ವಿಘಟನೆಯಾಗುವ ಮತ್ತು ಜೈವಿಕ ವಿಘಟನೆಯಾಗದ ವಸ್ತುಗಳ ವಿಂಗಡಣೆಗೆ ಸಹಾಯಕ.

- ಮರುಚಕ್ರೀಕರಣದಿಂದ ಕಚ್ಚಾವಸ್ತುಗಳ ಬಳಕೆ ಕಡಿಮೆ ಮಾಡಬಹುದು.
- ಇತರೆ ನೈಸರ್ಗಿಕ ಆಕರಗಳಿಗೆ ಹಾನಿಕಾರಕ ತ್ಯಾಜ್ಯಗಳು ಸೇರುವುದನ್ನು ನಿಯಂತ್ರಿಸಬಹುದು.

11. ಒಬ್ಬ ವಿದ್ಯಾರ್ಥಿಯು ಸೌತೆಕಾಯಿ ಚೂರುಗಳು, ಗಾಜಿನ ಚೂರು, ಬಾಳೆಹಣ್ಣಿನ ಸಿಪ್ಪೆ ಮತ್ತು ಪ್ಲಾಸ್ಟಿಕ್ ಪೆನ್ ಇವುಗಳನ್ನು ಒಂದು ಗುಂಡಿಯಲ್ಲಿ ಹಾಕಿ ಮುಚ್ಚುತ್ತಾನೆ. ಒಂದು ತಿಂಗಳಿನ ನಂತರ ಆ ವಸ್ತುಗಳಲ್ಲಿ ಯಾವ ಬದಲಾವಣೆಗಳನ್ನು ಗಮನಿಸಬಹುದು ? ಈ ಬದಲಾವಣೆಗಳಿಗೆ ವೈಜ್ಞಾನಿಕ ಕಾರಣ ಕೊಡಿ. APR-2019

ಉತ್ತರ : • ಸೌತೆಕಾಯಿ ಚೂರುಗಳು , ಬಾಳೆಹಣ್ಣಿನ ಸಿಪ್ಪೆ ಇವು ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು. ಇವು ವಿಘಟನೆ ಹೊಂದಿ ಕ್ರಮೇಣ ಮಣ್ಣಿನಲ್ಲಿ ಬೆರೆತು ಹೋಗುತ್ತವೆ.

- ಗಾಜಿನ ಚೂರು , ಪ್ಲಾಸ್ಟಿಕ್ ಪೆನ್ ಇವು ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳು. ಇವು ಕೊಳೆಯದೆ ಪರಿಸರದಲ್ಲಿ ಹಾಗೇ ಉಳಿದುಬಿಡುತ್ತವೆ. ಇವು ಮಾಲಿನ್ಯಕಾರಕಗಳಾಗಿವೆ.
- ಆದ್ದರಿಂದ ಆಹಾರ ಸರಪಳಿಯಲ್ಲಿ ಶಕ್ತಿಯ ಹರಿವು ಏಕಮುಖವಾಗಿರುತ್ತದೆ.

12. ತ್ಯಾಜ್ಯ ವಿಲೇವಾರಿ ಮಾಡುವಲ್ಲಿ ಉಂಟಾಗುವ ಸಮಸ್ಯೆಗಳನ್ನು ಕಡಿಮೆ ಮಾಡಲು ಇರುವ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ. JUN-2022

ಉತ್ತರ : • ಜೈವಿಕ ವಿಘಟನೆಗೊಳ್ಳುವ ಮತ್ತು ವಿಘಟನೆಗೊಳ್ಳುವ ತ್ಯಾಜ್ಯಗಳನ್ನು ಬೇರ್ಪಡಿಸುವುದು.

- ಜೈವಿಕ ವಿಘಟನೆಗೊಳ್ಳುವ ತ್ಯಾಜ್ಯಗಳಿಂದ ಕಾಂಪೋಸ್ಟ್ ತಯಾರಿಸುವುದು.
- ಜೈವಿಕ ವಿಘಟನೆಗೊಳ್ಳದ ತ್ಯಾಜ್ಯಗಳನ್ನು ಮರುಚಕ್ರೀಕರಣ ಪ್ರಕ್ರಿಯೆಗೆ ಒಳಪಡಿಸುವುದು.

13. ಜೈವಿಕ ವಿಘಟನೀಯವಲ್ಲದ ವಸ್ತುಗಳಿಂದ ಪರಿಸರದ ಮೇಲಾಗುವ ಯಾವುದಾದರೂ ಎರಡು ಪರಿಣಾಮಗಳನ್ನು ತಿಳಿಸಿ.

ಉತ್ತರ : • ಇವು ಮಣ್ಣು ಮತ್ತು ನೀರನ್ನು ಮಲೀನಗೊಳಿಸುತ್ತವೆ.

- ಇವು ಆಹಾರ ಸರಪಳಿ ಪ್ರವೇಶಿಸಿ ಜೈವಿಕ ಸಂವರ್ಧನೆಗೆ ಒಳಗಾಗುತ್ತವೆ.
- ಇವು ವಿಘಟನೆಗೊಳ್ಳದೆ ಇರುವುದರಿಂದ ಇವುಗಳ ವಿಲೇವಾರಿ ಮತ್ತು ಶೇಖರಣೆ ಮಾಡುವುದು ಕಷ್ಟ.

" ಈಸಲ ಫಲಿತಾಂಶ ನಮ್ಮದೇ "

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–7

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ವಿಷಯ: ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆಯ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

10–01–2025

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099

ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038



# ವಿವಿ ಪ್ರಶ್ನೆ ಪತ್ರಿಕೆಯಲ್ಲಿ ದೋಷಗಳು

## ಕನ್ನಡದ ಬಗ್ಗೆ ನಿರ್ಲಕ್ಷ್ಯವೇ? | ಸಾಹಿತಿಗಳು, ಕನ್ನಡಪರ ಸಂಘಟನೆಗಳು, ವಿದ್ಯಾರ್ಥಿಗಳು ಅಸಮಾಧಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಬಳ್ಳಾರಿ, ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಪದವಿ ಪರೀಕ್ಷೆಗಳು ನಡೆಯುತ್ತಿವೆ. ಬುಧವಾರ ನಡೆದ ಬಿಎ/ಬಿಎಸ್‌ಡಬ್ಲ್ಯೂ ಪದವಿ ಮೊದಲ ಸೆಮಿಸ್ಟಾರ್‌ನ ಬೆಸಿಕ್ ಇಂಗ್ಲೀಷ್ ಪೇಪರ್–2 (ಎನ್‌ಇಪಿ) ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಕನ್ನಡದಿಂದ ಇಂಗ್ಲೀಷ್‌ಗೆ ತರ್ಜುಮೆ ಮಾಡಲು ಕೊಟ್ಟಿರುವ ಕನ್ನಡದ ಎರಡು ಸಾಲುಗಳಲ್ಲಿ ದೋಷಿತತ ಪದಗಳು ನುಸುಳಿವೆ. ಅದರಲ್ಲೂ ಪ್ರಾಂಶುಪಾಲಕರ ಪ್ರಾಸ್ತಾವಿಕ ನುಡಿಯಲ್ಲಿಯೇ ಅಸಹ್ಯ ಪದ ಸೇರಿದ್ದರೂ, ಕರಡು ಪ್ರತಿಯನ್ನು ತಿದ್ದದೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಪ್ರಶ್ನೆ ಪತ್ರಿಕೆ ನೀಡಿರುವುದು ವಿವಿ ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದ್ದು, ವಿದ್ಯಾರ್ಥಿಗಳು ಸೇರಿದಂತೆ ಕನ್ನಡ ಪ್ರೇಮಿಗಳು, ಕರವೇ ಕಾರ್ಯಕರ್ತರು ವಿವಿ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕನ್ನಡ ನೆಲದಲ್ಲಿ ಕನ್ನಡದ ಹಿರಿಮೆಯನ್ನು ಎತ್ತಿಹಿಡಿಯಬೇಕಾದ ವಿಶ್ವವಿದ್ಯಾಲಯವು ಕಣ್ಮುಚ್ಚಿ ಆಡಳಿತನಡೆಸುತ್ತಿದೆ. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪದವಿ ಪೂರ್ಣಗೊಂಡರು ಮೊದಲ ವರ್ಷದ ಪರೀಕ್ಷೆ ಫಲಿತಾಂಶವನ್ನೇ ಇನ್ನೂ ಪ್ರಕಟಿಸುತ್ತಿಲ್ಲ ಎನ್ನುವ ಕೊರಗು ವಿದ್ಯಾರ್ಥಿಗಳಾಗಿದ್ದು, ಸ್ನಾತಕೋತ್ತರ ಶಿಕ್ಷಣವನ್ನು ಪಡೆಯಲಾರದಂತಾಗಿದೆ. ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದವರ ಕಾರ್ಯವೈಖರಿ ಸೇರಿದಂತೆ ವಿವಿ ವಿರುದ್ಧ ನಾನಾಕಾರಣಗಳಿಗೆ ವಿದ್ಯಾರ್ಥಿಗಳು ಪದೆ ಪದೇ ಪ್ರತಿಭಟನೆ ಮಾಡುತ್ತಾ ಬಂದಿದ್ದರೂ ಸರ್ಕಾರ ಗಮನಹರಿಸಿ ಸೂಕ್ತ ಕ್ರಮವಹಿಸಲು ಮುಂದಾಗದಿರುವುದೇ ಇಂತಹ ಎಡವಟ್ಟಗಳು ಮರುಕಳಿಸುತ್ತಿರುವುದಕ್ಕೆ ಸಾಕ್ಷಿ ಎನ್ನುತ್ತಿದ್ದಾರೆ ವಿದ್ಯಾರ್ಥಿಗಳು. ಇನ್ನಾದರೂ ಸರ್ಕಾರ ವಿಶ್ವವಿದ್ಯಾಲಯದ ಉನ್ನತ ಹುದ್ದೆಗಳಿಗೆ ಸಮರ್ಥವಾಗಿ ನಿರ್ವಹಿಸುವ ವ್ಯಕ್ತಿಗಳನ್ನು ನಿಯೋಜಿಸಿ, ವಿದ್ಯಾರ್ಥಿಗಳ ಭವಿಷ್ಯದ ಜೀವನಕ್ಕೆ ದಾರಿದೀಪವಾಗಬೇಕೆಂದು ವಿದ್ಯಾರ್ಥಿಗಳು, ಸಾಹಿತಿಗಳು ಆಗ್ರಹಿಸಿದ್ದಾರೆ.



SECTION - B

Answer any Four of the following questions. (4×5=20)

2. What is the central idea of the poem "The Sunshine Cat"?
3. Bring out the relationship of mother with nature.
4. Read the following passage and answer the following questions.

King Ashoka was a kind, wise and righteous ruler. He spent all his time thinking of the welfare of his subjects. He had a strong desire to make his subjects happy. His subjects could meet him at any time and in any place. He had trees planted on either side of the road; he had well dug by the road side; he had rest houses built for both men and animals. He was respected by every one.

a) What kind of a ruler was Ashoka?
b) How did Ashoka usually spend his time?
c) Write any two works ofAshoka which he did for the welfare of his subjects.
d) Pick up a Sentence from the passage which shows Ashoka was liberal with his subjects.
e) Whom did everyone respect?

5. Translate the following paragraph into English

ಎಲ್ಲ ಒಳ್ಳೆಯ ಗ್ರಂಥಾಯಲವಿರುತ್ತದೋ ಅಲ್ಲಿ ಜ್ಞಾನ ಹಾಗೂ ಸಂಶೋಧನೆ ಹೆಚ್ಚುತ್ತದೆ. ಇದರಿಂದ ವಿದ್ಯಾರ್ಥಿಗಳ ಜ್ಞಾನವು ಹೆಚ್ಚುತ್ತದೆ. ಮತ್ತು ದೇಶದ ಪ್ರಗತಿ ಕೊಡ ಸಾದ್ಯವಿದೆ ಎಂದು ನಮ್ಮ ಪ್ರಾಂಶುಪಾಲರ ಪ್ರಸ್ತಾವಿಕ ನುಡಿಯಲ್ಲಿ ಹೇಳಿದರು.

> ಸಾವಿರಾರು ವಿದ್ಯಾರ್ಥಿಗಳ ಕೈಗೆ ನೀಡುವ ಪ್ರಶ್ನೆಪತ್ರಿಕೆಯನ್ನು ಕೂಲಂಕುಷವಾಗಿ ಪರಿಗಣಿಸಿ, ತಿದ್ದುಪಡಿಗಳಿದ್ದರೆ, ಸರಿಪಡಿಸಿ ಪ್ರಶ್ನೆಪತ್ರಿಕೆಗಳನ್ನು ವಿತರಿಸಬೇಕು. ತಪ್ಪುಗಳ ನಂತರ ಸಂಬಂಧಿಸಿದ ಅಧಿಕಾರಿಗಳನ್ನು ತರಾಟೆಗೆ ತೆಗೆದಕೊಂಡರೆ ಸಾಲದು. ಕನ್ನಡ ಗೌರವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.
>
> – ನಿಷ್ಠಿ ರುದ್ರಪ್ಪ ಜಿಲ್ಲಾಧ್ಯಕ್ಷರು, ಕ.ಸಾ.ಪ.ಬಳ್ಳಾರಿ

> ವಿಶ್ವವಿದ್ಯಾಲಯದ ಸಿಬ್ಬಂದಿಗಳಿಂದಲೇ ಕನ್ನಡಕ್ಕೆ ಕುತ್ತು ಬರುತ್ತಿರುವುದು ಖೇಧಕರ. ಇದನ್ನು ಕರವೇ ಖಂಡಿಸುತ್ತದೆ. ಕನ್ನಡ ಭಾಷೆಯ ಅರಿವು ಇರುವವರನ್ನು ಜವಾಬ್ದಾರಿಯುತ ಕಾರ್ಯಕ್ಕೆ ನೇಮಿಸಬೇಕು. ಕನ್ನಡದ ನೆಲದಲ್ಲಿ ಕನ್ನಡಕ್ಕೆ ಧಕ್ಕೆಯುಂಟಾದರೆ ಪ್ರತಿಭಟನೆ ನಿಶ್ಚಿತ.
>
> – ತಾರಿಹಳ್ಳಿ ಹನುಮಂತಪ್ಪ ಜಿಲ್ಲಾಧ್ಯಕ್ಷರು ಕರವೇ, ವಿಜಯನಗರ

> ಪರೀಕ್ಷಾ ವಿಭಾಗದವರು ಕರಡುಪ್ರತಿ ತಿದ್ದುವಲ್ಲಿ ನಿರ್ಲಕ್ಷ್ಯ ತೋರಿರುವುದು ಗಮನಕ್ಕೆ ಬಂದಿದ್ದು, ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಇಂತಹ ಘಟನೆ ಮರುಕಳಿಸದಂತೆ ಮುನ್ನೆಚ್ಚರಿಕೆವಹಿಸಲಾಗುವುದು.
>
> – ಎಂ.ಮುನಿರಾಜು, ಕುಲಪತಿಗಳು, ವಿಎಸ್‌ಕೆಯು. ಬಳ್ಳಾರಿ.

> ಪ್ರಶ್ನೆ ಪತ್ರಿಕೆಯಲ್ಲಿ ಕನ್ನಡ ಪದಗಳನ್ನು ತಪ್ಪಾಗಿ, ಅಸಹ್ಯವಾಗಿ ನೀಡಿದರೆ, ಅವುಗಳನ್ನು ಹೇಗೆ ತರ್ಜುಮೆ ಮಾಡಬೇಕು. ಕೊಟ್ಟಂತೆ ಬರೆದಿದ್ದಕ್ಕೋ, ಸರಿಮಾಡಿ ಬರೆದಿದ್ದಕ್ಕೋ, ಯಾವುದಕ್ಕೆ ಅಂಕ ನೀಡುತ್ತಾರೋ ತಿಳಿಯದಂತಾಗಿದೆ. ವಿವಿಯ ತಪ್ಪುಗಳಿಗೆ ವಿದ್ಯಾರ್ಥಿಗಳಿಗೆ ಅಂಕಗಳ ಬರೆ ಬೀಳದಿರಲಿ.
>
> – ಪದವಿ ವಿದ್ಯಾರ್ಥಿಗಳು

# ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ 8 ಸಾವಿರ ಪ್ರಕರಣ ಇತ್ಯರ್ಥ–3 ಸಾವಿರ ಬಾಕಿ

## ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಹೇಳಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ತಾವು ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ, ಆಯೋಗದಲ್ಲಿ ಬಾಕಿ ಉಳಿದಿದ್ದ ಹಾಗೂ ಹೊಸದಾಗಿ ಸಲ್ಲಿಕೆಯಾದ ಪ್ರಕರಣಗಳೂ ಸೇರಿದಂತೆ ಒಟ್ಟು 11,200 ಪ್ರಕರಣಗಳ ಪೈಕಿ ಕಳೆದ 2024ರ ಡಿಸೆಂಬರ್ ಅಂತ್ಯವರೆಗೆ 8,061 ಪ್ರಕರಣಗಳನ್ನು ವಿಲೇ ಮಾಡಲಾಗಿದ್ದು, 3,139 ಪ್ರಕರಣಗಳು ವಿವಿಧ ಹಂತದಲ್ಲಿ ಬಾಕಿ ಇವೆ ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ಅವರು ಹೇಳಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದ ಅವರು, ತಾವು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಆಯೋಗದಲ್ಲಿ ದಾಖಲಾದ ಪ್ರಕರಣಗಳ ವಿಚಾರಣೆಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಬೆಂಗಳೂರಿಗೆ ಅಲೆಯುವುದನ್ನು ತಪ್ಪಿಸಲು ಆಯೋಗವೇ ಜಿಲ್ಲೆಗಳಿಗೆ ಭೇಟಿ ನೀಡುತ್ತಿದ್ದು, ಈಗಾಗಲೆ 16 ಜಿಲ್ಲೆಗಳಿಗೆ ಭೇಟಿ ನೀಡಲಾಗಿದೆ. ಜಿಲ್ಲಾ ಹಂತದಲ್ಲಿಯೇ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯ ಮಾಡಲಾಗುತ್ತಿದೆ. ಆಯೋಗಕ್ಕೆ ಹೆಚ್ಚಿನ ಸೌಕರ್ಯ ನೀಡುವಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ದೂರುಗಳನ್ನು ಆನ್‌ಲೈನ್ ಅಥವಾ ಅಂಚೆ ಮೂಲಕವೂ ಸಲ್ಲಿಸಬಹುದಾಗಿದೆ. ದೂರುದಾರರು ಇಲ್ಲದಿದ್ದರೂ ಅವರ ಪರವಾಗಿ ಬೇರೆ ಯಾರಾದರೂ ದೂರು ನೀಡಬಹುದು ಎಂದು ಅವರು ತಿಳಿಸಿದರು.


**ಜಿಲ್ಲೆಯಲ್ಲಿ 20 ಪ್ರಕರಣ ಇತ್ಯರ್ಥ, 7 ಪ್ರಕರಣ ಬಾಕಿ:** ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಕೆಯಾಗಿದ್ದ ಒಟ್ಟು 27 ಪ್ರಕರಣಗಳಲ್ಲಿ 20 ಪ್ರಕರಣ ಇತ್ಯರ್ಥ ಪಡಿಸಲಾಗಿದ್ದು, 07 ಪ್ರಕರಣ ಬಾಕಿ ಇವೆ ಎಂದು ಅಧ್ಯಕ್ಷರು ತಿಳಿಸಿದರು.

ಇದಕ್ಕೂ ಮುನ್ನ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಅವರು, ಜಿಲ್ಲಾ ಮಟ್ಟದಲ್ಲಿ ಪ್ರಕರಣಗಳ ವಿಚಾರಣೆ ದೂರು ಸ್ವೀಕಾರ ಮಾಡುವುದರಿಂದ ಸಾರ್ವಜನಿಕರ ಸ್ಪಂದನೆ ಉತ್ತಮವಾಗಿದೆ ಎಂದು ಹೇಳಿದರು.

ಆಯೋಗದ ನ್ಯಾಯಾಂಗದ ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಮಾತನಾಡಿ ಆಯೋಗದಿಂದ ಮಾನವ ಹಕ್ಕುಗಳ ಉಲ್ಲಂಘನೆ ನಿಯಂತ್ರಣಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗುತ್ತಿದೆ ಎಂದು ಹೇಳಿದರು.

ಮಾನವ ಹಕ್ಕುಗಳ ಆಯೋಗದ ಹೆಸರು ಹೇಳಿಕೊಂಡು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಬೆದರಿಕೆ ಒಡ್ಡುವುದು, ಹಣ ವಸೂಲಿ ಮಾಡಲು ಪ್ರಯತ್ನಿಸುವುದು ಕಂಡುಬಂದಲ್ಲಿ ಆಯೋಗಕ್ಕೆ ತಿಳಿಸಿದರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಆಯೋಗದ ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ್ ಹಾಗೂ ಇತರರು ಇದ್ದರು.

## ಆನಂದ ಬಾಣ




# ದೈಹಿಕ ವಿಕಲಚೇತನರಿಗೆ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಪಡೆಯಲು ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರಸಕ್ತ ಸಾಲಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವತಿಯಿಂದ ದೈಹಿಕ ವಿಕಲಚೇತನರಿಗಾಗಿ ಅನುಷ್ಠಾನಗೊಳಿಸುತ್ತಿರುವ ವ್ಹೀಲ್‌ಚೇರ್ ಯೋಜನೆಯಡಿ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಗಾಗಿ ಅರ್ಹದೈಹಿಕ ವಿಕಲಚೇತನರಿಂದ ಆನ್‌ಲೈನ್‌ನಲ್ಲಿ ಆರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶಲಿಂಗ ಎಸ್.ಗೊಟಖಿಂಡಿ ತಿಳಿಸಿದ್ದಾರೆ.

ಅರ್ಹ ದೈಹಿಕ ವಿಕಲಚೇತನರು ತಮ್ಮ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್‌ನ (SEVASINDU WEBSITE https://suvidha.karnataka.gov.in/) ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಜ.21 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಪಂ ವ್ಯಾಪ್ತಿಯ ವಿಆರ್‌ಡಬ್ಲ್ಯೂ, ನಗರಸಭೆ, ಪುರಸಭೆ, ಪ.ಪಂಗಳಲ್ಲಿ ಯುಆರ್‌ಡಬ್ಲ್ಯೂ, ತಾಪಂ ವ್ಯಾಪ್ತಿಯ ಎಂಆರ್‌ಡಬ್ಲ್ಯೂಗಳನ್ನು ಸಂಪರ್ಕಿಸಬಹುದು. ಹೊಸಪೇಟೆ–9945252991, ಹಗರಿಬೊಮ್ಮನಹಳ್ಳಿ–9741185924, ಕೂಡ್ಲಿಗಿ–8217626361, ಹೂವಿನಹಡಗಲಿ–9900890403, ಕೊಟ್ಟೂರು–7353974518, ಹರಪನಹಳ್ಳಿ–9901182525 ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದ್ದಾರೆ.

# ಕೌಶಲ್ಯ ತರಬೇತಿ ಪಡೆದ ಕಾರ್ಮಿಕರಿಗೆ ಬೇಡಿಕೆ ಹೆಚ್ಚು

## ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬರ ಮತ್ತುರು ಹೇಳಿಕೆ




■ **ಹಂಪಿ ಟೈಮ್ಸ್ ಹೊಸಪೇಟೆ**

ಕಟ್ಟಡ, ನಿರ್ಮಾಣ ಕಾರ್ಮಿಕರು ಸೇರಿದಂತೆ ವಿವಿಧ ವೃತ್ತಿ ಕಾರ್ಮಿಕರು ಕೌಶಲ್ಯ ತರಬೇತಿ ಪಡೆದು ವೃತ್ತಿನಿರತರಾದಾಗ ಪರಿಪೂರ್ಣ ಕಾರ್ಯ ನಿರ್ವಹಿಸಲು ಸಾಧ್ಯವಾಗಲಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬರ ಮತ್ತುರು ಹೇಳಿದರು.

ನಗರದ ವಾಲ್ಮೀಕಿ ಭವನದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡೆರೇಷನ್ ಜಿಲ್ಲಾ ಸಮಿತಿ, ಕ್ಯಾಡಮ್ಯಾಕ್ಸ್ ಸಂಸ್ಥೆ ಸಹಯೋಗದಲ್ಲಿ ಕಟ್ಟಡ ಕಾರ್ಮಿಕರಿಗೆ ಏರ್ಪಡಿಸಿದ್ದ ವೃತ್ತಿ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯಾದ್ಯಂತ 1.12 ಲಕ್ಷ ನೊಂದಾಯಿತ ಕಟ್ಟಡ ಮತ್ತು ಇತರೆ ಕಾರ್ಮಿಕರು ಇದ್ದು, ಮಂಡಳಿಯ ಆದೇಶದ ಮೇರೆಗೆ ಪ್ರಸ್ತುತ ಒಂದು ಸಾವಿರ ಕಟ್ಟಡ ಕಾರ್ಮಿಕರಿಗೆ ವಿವಿಧ ಹಂತಗಳಲ್ಲಿ ತರಬೇತಿ ಕಾರ್ಯಾಗಾರವನ್ನು ಕಟ್ಟಡ ನಿರ್ಮಾಣಗಳಲ್ಲಿ ವಿವಿಧ ವೃತ್ತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವೃತ್ತಿಪರ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ತರಬೇತಿಗಳನ್ನು ನೀಡಲಾಗುತ್ತದೆ. ಕಾರ್ಮಿಕರು ತರಬೇತಿಯ ಯೋಜನೆಯನ್ನು ಸದುಪಯೋಗಪಡಿಸಿ ಕೊಂಡು ಕೌಶಲ್ಯ ವೃದ್ಧಿ ಪಡಿಸಿಕೊಂಡು ತಮ್ಮ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಬೇಕು ಎಂದರು.

ಈ ವೇಳೆ ಕ್ಯಾಡಮ್ಯಾಕ್ಸ್ ಸಂಸ್ಥೆಯ ತರಬೇತುದಾರ ಮಲ್ಲಿಕಾರ್ಜುನ ಕಟ್ಟಡ ಕಾರ್ಮಿಕರಿಗೆ ತರಬೇತಿಯನ್ನು ನೀಡಿದರು. ಈ ವೇಳೆ ಕಟ್ಟಡ ಮತ್ತು ಇತರೆ ನಿರ್ಮಾಣ ಮಂಡಳಿಯ ಎಕ್ಸಿಕ್ಯೂಟಿವ್ ಪೂಜಾರಿ ತುರುಮಂದೆಪ್ಪ, ಕಾರ್ಮಿಕರ ಫೆಡರೆಷನ್ ಜಿಲ್ಲಾ ಸಮಿತಿಯ ಅಧ್ಯಕ್ಷ ಯಲ್ಲಾಲಿಂಗ, ಪ್ರಮುಖರಾದ ಗೋಪಾಲ ಉಪಸ್ಥಿತರಿದ್ದರು.

# ಮುಷ್ಕರದಲ್ಲಿ ಭಾಗವಹಿಸಿದ ಆಶಾ ಕಾರ್ಯಕರ್ತೆಯರು ಮರಳಿ ಕರ್ತವ್ಯಕ್ಕೆ ಹಾಜರಾಗಿ – ಡಾ.ಲಿಂಗರಾಜು

■ **ಹಂಪಿ ಟೈಮ್ಸ್ ಕೊಪ್ಪಳ**


ಮುಷ್ಕರದಲ್ಲಿ ಭಾಗವಹಿಸಿದ ಕೊಪ್ಪಳ ಜಿಲ್ಲೆಯ ಆಶಾ ಕಾರ್ಯಕರ್ತೆಯರು ಮರಳಿ ಕರ್ತವ್ಯಕ್ಕೆ ಹಾಜರಾಗುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಲಿಂಗರಾಜು ಟಿ ಅವರು ತಿಳಿಸಿದ್ದಾರೆ.

ಜನವರಿ 7 ರಿಂದ ರಾಜ್ಯ ಮಟ್ಟದಲ್ಲಿ ಆಶಾ ಕಾರ್ಯಕರ್ತೆಯರ ಮುಷ್ಕರ ನಡೆಯುತ್ತಿದ್ದು, ಈ ಮುಷ್ಕರದಲ್ಲಿ ಜಿಲ್ಲೆಯಿಂದ ಆಶಾ ಕಾರ್ಯಕರ್ತೆಯರು ಭಾಗವಹಿಸಿರುತ್ತಾರೆ. ಈಗಾಗಲೆ ಆರೋಗ್ಯ ಸಚಿವರು ತಮ್ಮ ಎಲ್ಲಾ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದ್ದು, ಸಾರ್ವಜನಿಕ ಆರೋಗ್ಯ ಹಿತ ದೃಷ್ಟಿಯಿಂದ ಮುಷ್ಕರದಲ್ಲಿ ಭಾಗವಹಿಸಿದ ಆಶಾ ಕಾರ್ಯಕರ್ತೆಯರು ಈ ಕೂಡಲೆ ಕರ್ತವ್ಯಕ್ಕೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ತ್ರಿಸೂತ್ರಗಳು

1. ಶಾಲೆಗೆ ಹೋಗದ ಶಿಕ್ಷಕರನ್ನು (Drop out teachers) ಶಾಲೆಗೆ ಕಳುಹಿಸಿ
2. ಶಾಲೆಗೆ ಹೋದ ಶಿಕ್ಷಕರನ್ನು ತರಗತಿಗೆ ಕಳಿಸಿ
3. ತರಗತಿಗೆ ಹೋದ ಶಿಕ್ಷಕರಿಂದ ಪಾಠ ಮಾಡಿಸಿ..

- ಮಹಿಮ

## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 09–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.46 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9330 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 74.743 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1589.00 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.213 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ | ಸಂವತ್ಸರ: ಕ್ರೋಧಿ

10–01–2025 – ಶುಕ್ರವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತಿಕಾ |
| ಯೋಗ | : ಶುಭ |
| ಕರಣ | : ವಿಷ್ಟಿ |
| ಸೂರ್ಯೋದಯ | : 07:11:25 |
| ಸೂರ್ಯಾಸ್ತ | : 17:57:48 |
| ರಾಹು ಕಾಲ | : 11:14–12:35 |
| ಯಮಘಂಡ ಕಾಲ | : 15:16–16:37 |
| ಗುಳಿಕ ಕಾಲ | : 08:32–09:53 |


ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ, ಪತ್ರಿಕೆಗಾಗಿ ಪತ್ರಿಕೆ ವಿತರಕರನ್ನು ಸಂಪರ್ಕಿಸಿ ಇ–ಪೇಪರ್‌ಗಾಗಿ ಭೇಟಿ ನೀಡಿ.
www.epaper.hampitimes.com